## ಕರ್ನಾಟಕ ಸರ್ಕಾರದ ನಡವಳಿ

**ವಿಷಯ** ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲುಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ**

1. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 282 ಬಿಸಿಎ 2018, ದಿ:28.01.2019 ಮತ್ತು 13.02.2020
2. ಪ್ರಸ್ತಾವನೆಸಂಖ್ಯೆ:ಕ.ಅಲೆಮಾರಿ.ಅ.ನಿ/ಮಾ.ಅ/ಸಿಆರ್-03/2020-21, ದಿ:13.05.2020

*************

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2019-20ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯನ್ವಯ ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ದಿ:27.02.2020 ರಂದು ನೋಂದಾಯಿಸಿ ಸ್ಥಾಪಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪ್ರಸ್ತಾವನೆಯಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಒದಗಿಸಿದ ರೂ.25.00 ಕೋಟಿಗಳನ್ನು ಬಿಡುಗಡೆ ಮಾಡಿರುತ್ತಾರೆ. ಹಾಗೂ 2020-21ನೇ ಸಾಲಿನ ಆಯವ್ಯಯದಲ್ಲಿ ರೂ.29.00 ಲಕ್ಷಗಳ ಷೇರು ಬಂಡವಾಳವನ್ನು ಲೆಕ್ಕಶೀರ್ಷಿಕೆ:4225-03-190-0-08 ರಲ್ಲಿ ಒದಗಿಸಿದೆ. ಆದ್ದರಿಂದ ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ನಿಗಮದಿಂದ ರೂ.25.29 ಕೋಟಿಗಳ ವೆಚ್ಚದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಾಜದ ಆರ್ಥಿಕ ಅಭೀವೃದ್ಧಿಗಾಗಿ ಸಾಲ ಮತ್ತು ಸಹಾಯಧನ ಒದಗಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಸದರಿ ಕಾರ್ಯಕ್ರಮಗಳ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. ಸ್ವಯಂ ಉದ್ಯೋಗ ಸಾಲ ಯೋಜನೆ.
2. ಸ್ವ-ಸಹಾಯ ಗುಂಪುಗಳ ಮೂಲಕ ಸಾಲ ಮತ್ತು ಸಹಾಯಧನ ಯೋಜನೆ.
3. ಅರಿವು ಶೈಕ್ಷಣಿಕ ಸಾಲ ಯೋಜನೆ
4. ಗಂಗಾ ಕಲ್ಯಾಣ ಯೋಜನೆ.
5. ಭೂಖರೀದಿ ಯೋಜನೆ.
6. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಯೋಜನೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು 19 SEP 2020

| | |
|---|---|
| ವ್ಯ.ನಿ. | ಪ್ರ.ವ್ಯ.-1 |
| ಸ.ಪ್ರ.ವ್ಯ. | ಪ್ರ.ವ್ಯ.-2 |

ಪ್ರಸ್ತಾವನೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ಬೆಂಗಳೂರು**
**ದಿನಾಂಕ:15-09-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2019-20ನೇ ಸಾಲಿಗೆ ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಒದಗಿಸಿರುವ ರೂ.2529.00 ಲಕ್ಷಗಳಲ್ಲಿ ರೂ.100.00 ಲಕ್ಷಗಳನ್ನು ಆಡಳಿತಾತ್ಮಕ ವೆಚ್ಚಕ್ಕೆ ವಿನಿಯೋಗಿಸಲು ಉಳಿಕೆ ರೂ.2429.00 ಲಕ್ಷಗಳಲ್ಲಿ ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಸಮಾಜ ಮತ್ತು ಅದರ ಉಪಜಾತಿಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ಥಾಪಿಸಿದ

ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಬಂಧ-1 ರಿಂದ 6 ರ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಸ್ವಯಂ ಉದ್ಯೋಗ ಸಾಲ ಯೋಜನೆ.
2. ಸ್ವ-ಸಹಾಯ ಗುಂಪುಗಳ ಮೂಲಕ ಸಾಲ ಮತ್ತು ಸಹಾಯಧನ ಯೋಜನೆ.
3. ಅರಿವು ಶೈಕ್ಷಣಿಕ ಸಾಲ ಯೋಜನೆ
4. ಗಂಗಾ ಕಲ್ಯಾಣ ಯೋಜನೆ.
5. ಭೂಖರೀದಿ ಯೋಜನೆ.
6. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಯೋಜನೆ.

ಈ ಆದೇಶವನ್ನು ಮಾನ್ಯ ಇಲಾಖಾ ಸಚಿವರ ಟಿಪ್ಪಣಿ ಸಂಖ್ಯೆ:23/2020 ದಿ:23.06.2020ರ ಅನುಮೋನದೆಯೊಂದಿಗೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 02 ಟಿಎಫ್‌ಪಿ 2020, ದಿ:30.05.2020 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು
ಅವರ ಹೆಸರಿನಲ್ಲಿ

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಕರು, (ಎ ಮತ್ತು ಇ) (ಲೆಕ್ಕಪರಿಶೋಧನೆ-12), ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ವ್ಯವಸ್ಥಾಕ ನಿರ್ದೇಶಕರು, ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
4. ರಾಜ್ಯ ಖಜಾನಾಧಿಕಾರಿಗಳು ಬೆಂಗಳೂರು.

**ಪ್ರತಿ:-**

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ.
3. ಸರ್ಕಾರದ ಅಪರ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

********

## ಅನುಬಂಧ-1

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ:15-09-2020 ಮಾರ್ಗಸೂಚಿಗಳು

### ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆಯ ಮಾರ್ಗಸೂಚಿಗಳು:

*****

**ಪ್ರಸ್ತಾವನೆ:-**

ಸನ್ಮಾನ್ಯ ಮುಖ್ಯಮಂತ್ರಿಯವರ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-169ರಲ್ಲಿ **"ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.25.00ಕೋಟಿ ಅನುದಾನ ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 262 ಬಿಸಿಎ 2018, ದಿನಾಂಕ:28/01/2019 ಮತ್ತು 13/02/2020ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:27/02/2020ರಂದು ನೋಂದಾಯಿಸಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಷೇರು ಬಂಡವಾಳ ಮತ್ತು ಅನುದಾನದಿಂದ ಅಲೆಮಾರಿ ಮತ್ತು ಇದರ ಉಪಜಾತಿಗಳ ಸ್ವಯಂ ಉದ್ಯೋಗಕ್ಕೆ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನವನ್ನು ಒದಗಿಸುವ ಕಾರ್ಯಕ್ರಮದ ನಿಯಮ/ನಿಬಂಧನೆ ಮತ್ತು ಮಾರ್ಗಸೂಚಿಗಳು ಈ ಕೆಳಕಂಡಂತೆ ಇವೆ.

1. **ಯೋಜನೆ ಉದ್ದೇಶ:-** ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಇದರ ಉಪಜಾತಿಗಳ ಸ್ವಯಂ ಉದ್ಯೋಗಕ್ಕೆ ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯ, ಸಾಂಪ್ರದಾಯಿಕ ವೃತ್ತಿಗಳು ಹಾಗು ವೃತ್ತಿ ಕಸಬುದಾರರಿಗೆ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಸಾಲ ಮತ್ತು ಸಹಾಯಧನದ ನೆರವು ನೀಡುವುದು.

2. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-**

   - ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 01-02-1966ರ ಸಂಖ್ಯೆ ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65 ಸರ್ಕಾರದ ಆದೇಶದಲ್ಲಿ ಗುರ್ತಿಸಿದ 1)ಬೈರಾಗಿ (ಬಾವ), 2)ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕಥಿ-ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಫಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ-ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.
   - ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.98,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ.1,20,000/-ಗಳನ್ನು ಮೀರಿರಬಾರದು.
   - ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
   - ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

- ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.
- ಈ ಯೋಜನೆಯಲ್ಲಿ ಒಬ್ಬ ವ್ಯಕ್ತಿ ಅಥವಾ ಸ್ವ-ಸಹಾಯ ಗುಂಪುಗಳು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸೌಲಭ್ಯ ಒದಗಿಸುವುದು.
- ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

3. **<u>ಘಟಕ ವೆಚ್ಚ-ಸಾಲ ಹಾಗು ಸಹಾಯಧನ:-</u>**

**ವೈಯಕ್ತಿಕ ಸಾಲ:** ಅರ್ಜಿದಾರರು ಸ್ವಯಂ ಉದ್ಯೋಗಕ್ಕೆ ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆ ಮತ್ತು ಸಾಮಾರ್ಥ್ಯಕ್ಕನುಗುಣವಾಗಿ ಗರಿಷ್ಠ ರೂ.2.00ಲಕ್ಷಗಳವರೆಗೆ ಆರ್ಥಿಕ ನೆರವನ್ನು ಈ ಕೆಳಕಂಡಂತೆ ಒದಗಿಸುವುದು.

1. ರೂ.50,000/-ಗಳವರೆಗಿನ ಘಟಕ ವೆಚ್ಚದ ಆರ್ಥಿಕ ಚಟುವಟಿಕೆಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನವನ್ನು ಹಾಗು ಉಳಿಕೆ ಶೇ.70ರಷ್ಟು ಗರಿಷ್ಠ ರೂ.40,000/-ಗಳನ್ನು ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡುವುದು.
2. ರೂ.50,001/-ರಿಂದ ರೂ.1,00,000/-ಗಳವರೆಗಿನ ಘಟಕ ವೆಚ್ಚದ ಆರ್ಥಿಕ ಚಟುವಟಿಕೆಗಳಿಗೆ ಶೇ.20ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ ಉಳಿಕೆ ಶೇ.80ರಷ್ಟು ಗರಿಷ್ಠ ರೂ.80,000/-ಗಳು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡುವುದು.
3. ರೂ.1,00,001/-ರಿಂದ ಗರಿಷ್ಠ ರೂ.2,00,000/-ಗಳ ವರೆಗಿನ ಘಟಕ ವೆಚ್ಚಗಳ ಆರ್ಥಿಕ ಚಟುವಟಿಕೆಗಳಿಗೆ ಕನಿಷ್ಠ ರೂ.20,000/-ಗಳಿಂದ ಗರಿಷ್ಠ ರೂ.30,000/-ಗಳ ಸಹಾಯಧನ, ಉಳಿಕೆ ಮೊತ್ತ ಶೇ.85ರಷ್ಟು ಗರಿಷ್ಠ ರೂ.1,70,000/-ಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡುವುದು.

4. **<u>ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳ ಅನುಷ್ಠಾನ:-</u>**

ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಜಿಲ್ಲಾ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| ಕ್ರ. ಸಂ | **ಅಧಿಕಾರಿಗಳು** | **ಪದನಾಮ** |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |

| | | |
|---|---|---|
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು |
| 7 | ಜನೆರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

5. **ಆಯ್ಕೆ ಸಮಿತಿಯ ಕರ್ತವ್ಯಗಳು:-**

- ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.
- ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆ/ಉದ್ಯಮ ಸ್ಥಾಪಿಸಲು ಹೊಂದಿರುವ ಅನುಭವ/ಆಸಕ್ತಿ/ಸಾಮರ್ಥ್ಯ ಇತ್ಯಾದಿಗಳನ್ನು ಫಲಾನುಭವಿಗಳ ಆಯ್ಕೆ ಸಮಯದಲ್ಲಿ ಮನವರಿಕೆ ಮಾಡಿಕೊಂಡು ಪರಿಗಣಿಸಿ ಆಯ್ಕೆ ಮಾಡಬೇಕು.
- ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯಿಂದ ಸಾಲ ಮಂಜೂರು ಮಾಡಿ, ಪ್ರಸ್ತಾವನೆಯನ್ನು ಅನುಮೋದಿಸಿ ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡಲು ಮಂಜೂರಾತಿ ಪ್ರಸ್ತಾವನೆಯನ್ನು ನಿಗಮದ ಕೇಂದ್ರ ಕಛೇರಿಗೆ/ವಿಭಾಗೀಯ ಕಛೇರಿಗೆ ಕಳುಹಿಸಬೇಕು.
- ಫಲಾನುಭವಿಯ ಹೆಸರು ಮತ್ತು ಪೂರ್ಣ ವಿಳಾಸ, ಜಾತಿ/ಆದಾಯ, ಜಾಮೀನುದಾರರ ಹೆಸರು ಮತ್ತು ಪೂರ್ಣ ವಿಳಾಸ, ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ (ಸರ್ವೆ ನಂ, ಜಮೀನಿನ ವಿಸ್ತೀರ್ಣ, ಅಂದಾಜು ಮೌಲ್ಯ ಇತ್ಯಾದಿ) ವಿವರ, ಸಾಲದ ಉದ್ದೇಶ, ಸಾಲದ ಮೊತ್ತ/ಸಹಾಯಧನ ಈ ಎಲ್ಲಾ ಅಂಶಗಳನ್ನು ಮಂಜೂರಾತಿ ಪ್ರಸ್ತಾವನೆಯಲ್ಲಿ ನಮೂದಿಸುವುದು.

6. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-** ಅರ್ಜಿದಾರರು ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು.

- ಹಿಂದುಳಿದ ವರ್ಗಗಳ ಪ್ರವರ್ಗ-1ರ ಅಲೆಮಾರಿ ಮತ್ತು ಅರೆ ಅಲೆಮಾರಿ ಇದರ ಉಪಜಾತಿಗಳಿಗೆ ಸೇರಿರುವುದಕ್ಕೆ ಸಂಬಂಧಿಸಿದ ತಹಶಿಲ್ದಾರ್‌ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
- ಅರ್ಜಿದಾರರ ವಾಸದ ಪುರಾವೆಗಾಗಿ ಸಕ್ಷಮ ಪ್ರಾಧಿಕಾರಿಗಳು ನೀಡಿದ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.

- ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
- ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ/ರದ್ದುಗೊಳಿಸಿದ ಚೆಕ್‌ನ ಪ್ರತಿ.
- ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆಯ ಅನುಭವ/ತರಬೇತಿ ಬಗ್ಗೆ ಪ್ರಮಾಣ ಪತ್ರ/ಸ್ವಯಂ ಘೋಷಣೆ ಪತ್ರ.
- ಅರ್ಜಿದಾರರು ಉದ್ಯಮ ಸ್ಥಾಪಿಸಲು ಅವಶ್ಯವಿರುವ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಲು ಸರಬರಾಜುದಾರರಿಂದ ಪಡೆದ Invoice ಮತ್ತು ಯೋಜನಾ ವರದಿ ಒದಗಿಸುವುದು.
- ಅರ್ಜಿದಾರರು ಸ್ಥಾಪಿಸುವ ಉದ್ಯಮಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಅಗತ್ಯ ಲೈಸೆನ್ಸ್ ಹಾಗು ಪರವಾನಗಿ ಹೊಂದಿರಬೇಕು.
- ಸಾರಿಗೆ ಉದ್ದೇಶಕ್ಕಾಗಿ ಸಾಲ ಬಯಸಿದಲ್ಲಿ ಅರ್ಜಿದಾರರು ಡ್ರೈವಿಂಗ್ ಲೈಸೆನ್ಸ್ ಮತ್ತು ಬ್ಯಾಡ್ಜ್ ಹೊಂದಿರಬೇಕು.
- ಅರ್ಜಿದಾರರ ಹಾಗೂ ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣಾ ಪತ್ರ (ನಿಗದಿತ ನಮೂನೆಯಲ್ಲಿ).
- ರೂ.1,00,000/-ಗಳಿಗಿಂತ ಹೆಚ್ಚಿನ ಸಾಲಕ್ಕೆ ಸಾಲದ ಭದ್ರತೆಗೆ ಸಾಲದ ಮೊತ್ತದಷ್ಟು ಮೌಲ್ಯವಿರುವ ಅರ್ಜಿದಾರರು/ಜಾಮೀನುದಾರರ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಆಧಾರ ಮಾಡಿಕೊಡಬೇಕು **(ಸರಳ ನೋಂದಾಯಿತ ಅಡಮಾನ ಪತ್ರದ ಮೂಲಕ) (Simple Registered Mortgage Deed)**.
- ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರ ನೀಡುವ ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಒದಗಿಸಬೇಕು.
  - ➢ ಸಾಲದ ಭದ್ರತೆಗೆ ನೀಡುವ ಸ್ಥಿರಾಸ್ತಿಯ ಮೂಲ ಪತ್ರ
  - ➢ ಮ್ಯೂಟೇಷನ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ
  - ➢ ಪಿತ್ರಾರ್ಜಿತ ಆಸ್ತಿಯಾಗಿದ್ದಲ್ಲಿ: (1) ಆಸ್ತಿ ವಿಭಾಗ ಪತ್ರ (2) ಎಂ.ಆರ್.ಕಾಪಿ
  - ➢ ಜಮೀನು ಆಗಿದ್ದಲ್ಲಿ ಚಾಲ್ತಿ ವರ್ಷದ ಪಹಣಿ ಪತ್ರ ಮತ್ತು ಲಾವಣಿ ಪತ್ರ
  - ➢ ಚಾಲ್ತಿ ವರ್ಷದವರೆಗೆ ಕಂದಾಯ ಪಾವತಿಸಿದ ರಶೀದಿ
  - ➢ ಖಾತಾ ಎಕ್ಸ್‌ಟ್ರಾಕ್ಟ್ ಮತ್ತು ಪಟ್ಟಾಪುಸ್ತಕ.
  - ➢ ಸ್ಥಿರಾಸ್ತಿಯ ಚೆಕ್ಕು ಬಂದಿ.
  - ➢ ಇ.ಸಿ. (13 ವರ್ಷಗಳದ್ದು) ನಮೂನೆ-15ರಲ್ಲಿ
  - ➢ ಉಪನೋಂದಣಾಧಿಕಾರಿಗಳಿಂದ ಪಡೆದ ಸ್ಥಿರಾಸ್ತಿಯ ಮೌಲ್ಯ ನಿರ್ಣಯ ವರದಿ.
- ಜಾಮೀನುದಾರರ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು).
- ಅರ್ಜಿದಾರರ/ಜಾಮೀನುದಾರರ ವಂಶವೃಕ್ಷ. (ವಂಶವೃಕ್ಷದಲ್ಲಿ ತೋರಿಸಿರುವ ಕಾನೂನು ಬದ್ಧ ಹಕ್ಕುದಾರರಿಂದ ಆಸ್ತಿಯನ್ನು ನಿಗಮಕ್ಕೆ ಆಧಾರ ಮಾಡುವ ಬಗ್ಗೆ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು)

7. <u>**ಸಾಲ ಮಂಜೂರಾತಿಯ ವಿಧಾನ:-**</u>

- ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

- ಜಿಲ್ಲಾ ವ್ಯವಸ್ಥಾಪಕರು ಅರ್ಹ ಅರ್ಜಿಗಳ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.
- ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಕೈಗೊಳ್ಳುವ ಉದ್ದೇಶದ ಲಾಭದಾಯಕತೆ ಮತ್ತು ಸಮಂಜಸತೆ, ಅನುಭವ, ಮರುಪಾವತಿ ಇಚ್ಛಾಶಕ್ತಿ, ಸಾಲದ ಭದ್ರತೆಗೆ ಒದಗಿಸಿರುವ ದಾಖಲೆಗಳನ್ನು ಮುಂತಾದ ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡುವುದು.
- ಫಲಾನುಭವಿಗಳನ್ನು ಪ್ರವರ್ಗ-1ರಲ್ಲಿ ಬರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಇದರ ಎಲ್ಲಾ ಉಪಜಾತಿಗಳಿಗೂ ಪ್ರಾತಿನಿಧ್ಯತೆ ನೀಡಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.
- ಜಿಲ್ಲಾ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ರೂ.1,00,000/-ಗಳವರೆಗಿನ ಘಟಕ ವೆಚ್ಚ ಪ್ರಸ್ತಾವನೆಗಳನ್ನು ವಿಭಾಗೀಯ ಕಛೇರಿಗೆ ಕಳುಹಿಸಬೇಕು. ವಿಭಾಗೀಯ ಕಛೇರಿಯಲ್ಲಿ ಜಿಲ್ಲೆಗೆ ನಿಗಧಿಪಡಿಸಿದ ಆರ್ಥಿಕ ಗುರಿಗನುಗುಣವಾಗಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರಾತಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವುದು ಹಾಗು ಸಾಲದ ಮೊತ್ತಕ್ಕೆ ಅಗತ್ಯ ಕಾನೂನು ಬದ್ದ ದಾಖಲಾತಿಗಳನ್ನು ಪಡೆದ ಬಗ್ಗೆ ಜಿಲ್ಲಾ ವ್ಯವಸ್ಥಾಪಕರಿಂದ ದೃಢೀಕರಣ ಪಡೆದು ಫಲಾನುಭವಿಗಳು ಹೊಂದಿರುವ ಬ್ಯಾಂಕ್ ಖಾತೆಗೆ ಮಂಜೂರಾದ ಸಾಲ ಮತ್ತು ಸಹಾಯಧನದ ಮೊತ್ತವನ್ನು ಆರ್.ಟಿ.ಜಿ.ಎಸ್. ಮೂಲಕ ಜಮಾ ಮಾಡುವುದು. ನಂತರ ಈ ಬಗ್ಗೆ ಮಂಜೂರಾತಿ ಆದೇಶ ಹೊರಡಿಸುವುದು.
- ರೂ.1,00,000/-ಗಳಿಂದ ರೂ.2,00,000/-ಗಳವರೆಗೆ ಮಂಜೂರು ಮಾಡುವ ಸಾಲ ಮತ್ತು ಸಹಾಯಧನದ ಮಂಜೂರಾತಿಗೆ ಪ್ರಸ್ತಾವನೆಯೊಂದಿಗೆ ಫಲಾನುಭವಿಗಳಿಂದ ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರಿಂದ ಪಡೆದ ಸ್ಥಿರಾಸ್ತಿಯ ದಾಖಲೆಗಳನ್ನು ಹಾಗೂ ಅರ್ಜಿಯನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕರು ನಿಗಮದ ಕೇಂದ್ರ ಕಛೇರಿಗೆ ಕಳುಹಿಸುವುದು.
- ಕೇಂದ್ರ ಕಛೇರಿಯಲ್ಲಿ ಜಿಲ್ಲಾ ಕಛೇರಿಯಿಂದ ಸ್ವೀಕರಿಸಿದ ಸ್ಥಿರಾಸ್ತಿಯ ದಾಖಲೆಗಳನ್ನು ನಿಗಮದ ಕಾನೂನು ಸಲಹೆಗಾರರ ಮೂಲಕ ದಾಖಲೆಗಳನ್ನು ಪರಿಶೀಲಿಸಿ ಸಾಲದ ಭದ್ರತೆಗೆ ಸೂಕ್ತವಾಗಿರುವ ಬಗ್ಗೆ ಅಭಿಪ್ರಾಯ ಪಡೆಯಬೇಕು. ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯವನ್ನು ಆಧರಿಸಿ ಸಾಲ ಮಂಜೂರಾತಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡುವುದು.
- ಕೇಂದ್ರ ಕಛೇರಿಯಿಂದ ಆಡಳಿತಾತ್ಮಕ ಮಂಜೂರಾತಿ ಆದೇಶ ದೊರೆತ ನಂತರ ಫಲಾನುಭವಿ/ಜಾಮೀನುದಾರರು ಒದಗಿಸಿರುವ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಸಾಲ ಮರುಪಾವತಿಯಾಗುವವರೆಗೂ **ಸರಳ ನೋಂದಾಯಿತ ಅಡಮಾನ (Simple Registered Mortgage Deed)** ಮಾಡಿಸುವುದು. ನಿಗಮದ ಹೆಸರು ದಾಖಲಾಗಿರುವ ಬಗ್ಗೆ ಇ.ಸಿ.ಯನ್ನು ಪಡೆಯಬೇಕು. ಹೀಗೆ ರಿಜಿಸ್ಟರ್ಡ್ ಮಾಡಿದ ಮೂಲ ಪತ್ರ ಹಾಗೂ ಇ.ಸಿ.ಯನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸುವುದು. ಕೇಂದ್ರ ಕಛೇರಿಯಲ್ಲಿ ಈ ದಾಖಲೆಗಳನ್ನು ಪರಿಶೀಲಿಸಿ ಆಯ್ಕೆ ಸಮಿತಿ ಮಂಜೂರು ಮಾಡಿರುವಂತೆ ಸಾಲ ಬಿಡುಗಡೆ
  ಮಾಡಿ ಫಲಾನುಭವಿಯ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಶಾಖೆಯ ಹೆಸರು ಮತ್ತು ಖಾತಾ ಸಂಖ್ಯೆಯನ್ನು ನಮೂದಿಸಿದ ಕ್ರಾಸ್ಡ್ ಚೆಕ್ ರಚಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಸಾಲ ಬಿಡುಗಡೆ ಆದೇಶದೊಂದಿಗೆ ಕಳುಹಿಸುವುದು.
- ಜಿಲ್ಲಾ ವ್ಯವಸ್ಥಾಪಕರು ಸಾಲ ಬಿಡುಗಡೆಯಾದ ಫಲಾನುಭವಿಗಳಿಂದ/ಜಾಮೀನುದಾರರಿಂದ ನಿಗದಿತ ನಮೂನೆಯಲ್ಲಿ ಭದ್ರತಾ ದಾಖಲೆಗಳಿಗೆ ಸಹಿಮಾಡಿಸಿಕೊಂಡು, ದಾಖಲಾತಿಗಳನ್ನು ಸಂರಕ್ಷಿಸಿಡಬೇಕು.
- ಸಾಲದ ಮೊತ್ತವು ಉದ್ಯಮ ಸ್ಥಾಪನೆಗೆ/ಯಂತ್ರೋಪಕರಣಗಳ ವೆಚ್ಚಕ್ಕೆ ಕಡಿಮೆ ಇದ್ದಲ್ಲಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯೇ ಭರಿಸತಕ್ಕದ್ದು.

.....6

- ಸಾಲದ ಮೊತ್ತದಿಂದ ಫಲಾನುಭವಿ ಉದ್ಧೇಶಿತ ಉದ್ಯಮ ಸ್ಥಾಪಿಸಿ ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಖಾತ್ರಿಪಡಿಸಿಕೊಳ್ಳುವುದು.

8. **ವಿಮೆ:** ಸಾಲದ ಮೊತ್ತದಿಂದ ಸ್ಥಾಪಿಸಿದ ಉದ್ಯಮವನ್ನು ವ್ಯಾಪಕ ವಿಮೆಗೆ ಒಳಪಡಿಸುವುದು. ಇದಕ್ಕೆ ತಗಲುವ ಪ್ರಿಮಿಯಮ್ ಮೊತ್ತವನ್ನು ಫಲಾನುಭವಿ ಭರಿಸಬೇಕು. ವಿಮೆ ಮಾಡಿಸಿರುವ ಬಗ್ಗೆ ಫಲಾನುಭವಿಯಿಂದ ಪ್ರಿಮಿಯಮ್ ಪಾವತಿ ದಾಖಲೆಗಳನ್ನು ಸಂಗ್ರಹಿಸಿ ಭದ್ರತಾ ದಾಖಲಾತಿಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ಸಂಗ್ರಹಿಸಿಡಬೇಕು.

9. **ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-**ಸಾಲದ ಭದ್ರತೆಗೆ ಈ ಕೆಳಕಂಡ ನಿಗಧಿತ ದಸ್ತಾವೇಜುಗಳನ್ನು ಫಲಾನುಭವಿಯಿಂದ/ಜಾಮೀನುದಾರರಿಂದ ಪಡೆಯಬೇಕು.

- ಪ್ರಾಮಿಸರಿ ನೋಟ್
- ಡಿ.ಪಿ.ನೋಟ್ ಡೆಲಿವರಿ ಲೆಟರ್ } ಫಲಾನುಭವಿಯಿಂದ
- ಲೆಟರ್ ಆಫ್ ರೀಪೆಮೆಂಟ್
- ಹೈಪಾಥಿಕೇಷನ್ ಡೀಡ್ - ರೂ.100 ಚಾಪಾ ಕಾಗದದಲ್ಲಿ
- ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್ - ರೂ.100 ಚಾಪಾ ಕಾಗದದಲ್ಲಿ
- ಲೆಟರ್ ಆಫ್ ಗ್ಯಾರಂಟಿ -ಜಾಮೀನುದಾರರಿಂದ(ರೂ.100ಚಾಪಾ ಕಾಗದದಲ್ಲಿ)
- ಸಾಲದ ಮರುಪಾವತಿ ಅವಧಿ ಪೂರ್ಣಗೊಳ್ಳುವ ಮೊದಲು ಫಲಾನುಭವಿ ಹಾಗೂ ಜಾಮೀನುದಾರರಿಂದ ಋಣದ ಒಪ್ಪಿಗೆ ಪತ್ರ (Acknowledgement of Debt) ಪಡೆಯುವುದು
- ಸ್ವ-ಸಹಾಯ ಸಂಘಗಳಿಂದ Memorandum of Agreement ಅನ್ನು ರೂ.200/-ಗಳ ಚಾಪಾ ಕಾಗದದಲ್ಲಿ.

10. **ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-** ಆಯ್ಕೆ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿಗಳ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ಖಾತಾ ಪುಸ್ತಕದಲ್ಲಿ ನಿರ್ವಹಿಸುವುದು.

11. **ಮರುಪಾವತಿ ಅವಧಿ:-**

ಈ ಯೋಜನೆಯಲ್ಲಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 34 (3 ವರ್ಷಗಳು) ಕಂತುಗಳಲ್ಲಿ ಮರುಪಾವತಿಸಬೇಕು. ಇದರಲ್ಲಿ 2 ತಿಂಗಳ ವಿರಮಾವಧಿ ಇರುತ್ತದೆ.

12. **ಡಿ.ಸಿ.ಬಿ ತಯಾರಿಸಿ ಸಾಲ ವಸೂಲಾತಿಗೆ ಕ್ರಮ:-**

(a) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಮರುಪಾವತಿಸಬೇಕು. ವಿಳಂಭದ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಿ ವಸೂಲಿ ಮಾಡಬೇಕು.

(b) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ ನಿಯಮಾನಯಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು.

13. **ಉದ್ಯಮಶೀಲತಾ ತರಬೇತಿ:-** ಈ ಕಾರ್ಯಕ್ರಮದಲ್ಲಿ ಆಯ್ಕೆ ಮಾಡಿ ಸೌಲಭ್ಯ ಮಂಜೂರು ಮಾಡಿದ ಫಲಾನುಭವಿಗಳಿಗೆ ಘಟಕಗಳ ನಿರ್ವಹಣೆ, ಉಪಯೋಗ, ಸಾಲ ಮರುಪಾವತಿ, ವಿಮೆ ಕುರಿತು ಅರಿವು ಮೂಡಿಸಲು ಉದ್ಯಮ ಶೀಲತಾ ತರಬೇತಿ ಒದಗಿಸುವುದು.

...7

14. **<u>ಸಾಲ ಉಪಯೋಗದ ಬಗ್ಗೆ ಘಟಕ ತಪಾಸಣಾ ವರದಿ:-</u>** ನಿಗಮದ ಜಿಲ್ಲಾ ವ್ಯವಸ್ಥಾಪಕರು, ಫಲಾನುಭವಿ ಪಡೆದ ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಅಗಿಂದಾಗೆ ಪರಿಶೀಲನೆ ಮಾಡುವುದು.

15. **<u>ನಿಯಮಗಳಿಗೆ ತಿದ್ದುಪಡಿ:-</u>** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

15/9/17

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

<u>ಅನುಬಂಧ-2</u>

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ:15-09-2020 ರ ಮಾರ್ಗಸೂಚಿಗಳು**

**ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸ್ವಸಹಾಯ ಗುಂಪುಗಳ ಮೂಲಕ ಸಾಲ ಮತ್ತು ಸಹಾಯಧನದ ಸೌಲಭ್ಯ ಒದಗಿಸಲು ಅನುಷ್ಠಾನಗೊಳಿಸುವ ಯೋಜನೆಯ ನಿಯಮ ಮತ್ತು ಮಾರ್ಗಸೂಚಿಗಳು.**

* * * * * * * * * *

**<u>ಪ್ರಸ್ತಾವನೆ:-</u>**

ಸನ್ಮಾನ್ಯ ಮುಖ್ಯಮಂತ್ರಿಯವರ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-169ರಲ್ಲಿ **"ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.25.00ಕೋಟಿ ಅನುದಾನ ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 262 ಬಿಸಿಎ 2018, ದಿನಾಂಕ:28/01/2019 ಮತ್ತು 13/02/2020ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:27/02/2020ರಂದು ನೋಂದಾಯಿಸಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನದಿಂದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಾಜದವರ ಸ್ವಯಂ ಉದ್ಯೋಗಕ್ಕೆ ಕೈಗೊಳ್ಳಲು ಮಹಿಳೆಯರಿಗೆ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ನೆರವು ಒದಗಿಸುವ ಕಾರ್ಯಕ್ರಮದ ನಿಯಮ/ನಿಬಂಧನೆ ಮತ್ತು ಮಾರ್ಗಸೂಚಿಗಳು ಈ ಕೆಳಕಂಡಂತೆ ಇವೆ.

1. **<u>ಯೋಜನೆಯ ಉದ್ದೇಶಗಳು</u>**

   1) ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸ್ವಸಹಾಯ ಗುಂಪುಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಹಾಗೂ ಸಹಾಯಧನವನ್ನು ಒದಗಿಸುವುದು.

2. **<u>ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು</u>**

   ಅ) ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅರ್ಜಿದಾರರು ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದ್ದ ಮಹಿಳೆಯರು ಸ್ವಸಹಾಯ ಗುಂಪಿನ ಸದಸ್ಯರಾಗಿರಬೇಕು.

   ಆ) ದಿನಾಂಕ: 01-02-1966ರ ಸಂಖ್ಯೆ ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65 ಸರ್ಕಾರದ ಆದೇಶದಲ್ಲಿ ಗುರ್ತಿಸಿದ 1)ಬೈರಾಗಿ (ಬಾವ), 2)ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕಥಿ-ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ-ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ,

   ಇ) 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.

   ಈ) ಅರ್ಜಿದಾರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 98,000/-ಗಳು ಪಟ್ಟಣ ಪ್ರದೇಶದವರಿಗೆ ರೂ. 1,20,000/-ರೂ.ಗಳನ್ನು ಮೀರಿರಬಾರದು.

   ಉ) ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.

   ಊ) ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

   ಋ) ನಿಗಮದ ಬೇರೆ ಯಾವುದೇ ಯೋಜನೆಯಲ್ಲಿ ಸಾಲ ಅಥವಾ ಸವಲತ್ತು ಪಡೆದಿರಬಾರದು.

ಎ) ಈ ಯೋಜನೆಯಲ್ಲಿ ಶೇ.5ರಷ್ಟು ಅಂಗವಿಕಲರಿಗೆ ಸೌಲಭ್ಯ ಒದಗಿಸಬೇಕು.

ಏ) ಈ ಯೋಜನೆಯಲ್ಲಿ ಸಾಲ ಪಡೆಯ ಬಯಸುವ ಅರ್ಜಿದಾರರು ಯಾವುದಾದರೂ ಆರ್ಥಿಕ ಚಟುವಟಿಕೆ ಕೈಗೊಳ್ಳಬೇಕು.

ಐ) ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡಿರಬೇಕು. ಅಥವಾ ರಚಿಸಿಕೊಳ್ಳಬೇಕು. ಸ್ವಸಹಾಯ ಗುಂಪುಗಳ ಸದಸ್ಯರಿಗೆ ಗುಂಪುಗಳ ಮೂಲಕ ಸೌಲಭ್ಯ ಒದಗಿಸಲಾಗುವುದು.

ಒ) ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಸ್ವಸಹಾಯ ಗುಂಪುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಶಾಖೆಗಳಲ್ಲಿ ಖಾತೆ ಹೊಂದಿರಬೇಕು.

3. <u>ಘಟಕವೆಚ್ಚ, ಸಾಲದ ಮೊತ್ತ ಮತ್ತು ಸಹಾಯಧನ</u>

ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಸ್ವಸಹಾಯ ಗುಂಪುಗಳ 15 ಸದಸ್ಯರಿಗೆ ತಲಾ ರೂ. 5,000/-ಗಳ ಸಹಯಧನ ಹಾಗೂ ತಲಾ ರೂ. 15,000/-ಗಳ ಸಾಲವನ್ನು ಶೇ.4ರಷ್ಟು ಬಡ್ಡಿದರದಲ್ಲಿ ಹೀಗೆ ಪ್ರತಿ ಗುಂಪಿಗೆ ರೂ. 75,000/-ಗಳ ಸಹಾಯಧನ ಹಾಗೂ ರೂ 2,25,000/-ಗಳ ಸಾಲ ಒಟ್ಟು ರೂ. 3,00,000/-ಗಳನ್ನು ಮಂಜೂರು ಮಾಡುವುದು.

4. <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು</u>

1) ಅರ್ಜಿದಾರರು ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಸೇರಿರುವ ಬಗ್ಗೆ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರ್/ ಕಂದಾಯ ಅಧಿಕಾರಿಗಳಿಂದ ನಿಗದಿತ ನಮುನೆಯಲ್ಲಿ ಪಡೆದ ಜಾತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರ.
2) ಅರ್ಜಿದಾರರ ವಾಸದ ಪುರಾವೆಗಾಗಿ ಆಧಾರ್ ಕಾರ್ಡ್/ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ.
3) ಅರ್ಜಿದಾರರ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 03 ಫೋಟೊಗಳು.
4) ಸ್ವಸಹಾಯ ಗುಂಪು ರಚಿಸಿರುವ ಬಗ್ಗೆ ಸ್ವಸಹಾಯ ಗುಂಪಿನ ನಡವಳಿ ಪುಸ್ತಕ ಹಾಗೂ ಬ್ಯಾಂಕ್ ಶಾಖೆಗಳಲ್ಲಿ ಸ್ವಸಹಾಯ ಗುಂಪಿನ ಹೆಸರಿನಲ್ಲಿ ಹೊಂದಿರುವ ಖಾತಾ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಸಂಖ್ಯೆಯ ಮಾಹಿತಿಗೆ ಪಾಸ್‌ಪುಸ್ತಕದ ಜೆರಾಕ್ಸ್ ಅಥವಾ ರದ್ದುಗೊಳಿಸಿದ ಚೆಕ್ಕನ ಪ್ರತಿ.
5) ಸಾಲದ ಭದ್ರತೆಗೆ ಸ್ವಸಹಾಯ ಗುಂಪಿನ ಎಲ್ಲಾ ಸದಸ್ಯರು ಬದ್ದರಾಗಿರುವ ಬಗ್ಗೆ ಮುಚ್ಚಳಿಕೆ ಬರೆದು ಕೊಡಬೇಕು.
6) ಅರ್ಜಿದಾರರ ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣ ಭಾರದ ಘೋಷಣೆ.
7) ಅರ್ಜಿದಾರರ ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ.
8) ಸ್ವಸಹಾಯ ಸಂಘವು ಸರ್ಕಾರದ ಇತರೆ ಇಲಾಖೆ ಹಾಗೂ ಬ್ಯಾಂಕ್‌ಗಳಿಂದ ಸಾಲ ಪಡೆಯದೇ ಇರುವ ಬಗ್ಗೆ ದೃಢೀಕರಣ.

5. <u>ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳ ಅನುಷ್ಠಾನ:-</u>

ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಜಿಲ್ಲಾ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| ಕ್ರ.ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |

| | | |
|---|---|---|
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು |
| 7 | ಜನೆರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

6. **ಆಯ್ಕೆ ಸಮಿತಿಯ ಕರ್ತವ್ಯಗಳು:-**

- ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.
- ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆ/ಉದ್ಯಮ ಸ್ಥಾಪಿಸಲು ಹೊಂದಿರುವ ಅನುಭವ/ಆಸಕ್ತಿ/ಸಾಮರ್ಥ್ಯ ಇತ್ಯಾದಿಗಳನ್ನು ಫಲಾನುಭವಿಗಳ ಆಯ್ಕೆ ಸಮಯದಲ್ಲಿ ಮನವರಿಕೆ ಮಾಡಿಕೊಂಡು ಪರಿಗಣಿಸಿ ಆಯ್ಕೆ ಮಾಡಬೇಕು.
- ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯಿಂದ ಸಾಲ ಮಂಜೂರು ಮಾಡಿ, ಪ್ರಸ್ತಾವನೆಯನ್ನು ಅನುಮೋದಿಸಿ ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡಲು ಮಂಜೂರಾತಿ ಪ್ರಸ್ತಾವನೆಯನ್ನು ನಿಗಮದ ಕೇಂದ್ರ ಕಛೇರಿಗೆ/ವಿಭಾಗೀಯ ಕಛೇರಿಗೆ ಕಳುಹಿಸಬೇಕು.
- ಫಲಾನುಭವಿಯ ಹೆಸರು ಮತ್ತು ಪೂರ್ಣ ವಿಳಾಸ, ಜಾತಿ/ಆದಾಯ, ಜಾಮೀನುದಾರರ ಹೆಸರು ಮತ್ತು ಪೂರ್ಣ ವಿಳಾಸ, ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ವಿವರ, ಸಾಲದ ಉದ್ದೇಶ, ಸಾಲದ ಮೊತ್ತ/ಸಹಾಯಧನ ಈ ಎಲ್ಲಾ ಅಂಶಗಳನ್ನು ಮಂಜೂರಾತಿ ಪ್ರಸ್ತಾವನೆಯಲ್ಲಿ ನಮೂದಿಸುವುದು.

7. **ಸಾಲ ಮಂಜೂರಾತಿ ವಿಧಾನ:-**

ಕೇಂದ್ರ ಕಛೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರಿಂದ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಹಾಯಧನ ಮತ್ತು ಸಾಲವನ್ನು ಮಂಜೂರು ಮಾಡಿ ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡಬೇಕು. ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡಿದ ಫಲಾನುಭವಿಗಳಿಂದ ಹಾಗೂ ಜಾಮೀನುದಾರರಿಂದ ಜಿಲ್ಲಾ ವ್ಯವಸ್ಥಾಪಕರು ದಸ್ತಾವೇಜುಗಳನ್ನು ಪಡೆದು ಸಂರಕ್ಷಿಸಿಡಬೇಕು. ದಸ್ತಾವೇಜು ಪಡೆದ SHG /ಪಲಾನುಭವಿಗಳಿಗೆ ಸಾಲ ಮತ್ತು ಸಹಾಯಧನವನ್ನು ಫಲಾನುಭವಿಗಳ ಪರವಾಗಿ SHG ಯ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್ ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಬೇಕು.

8. **ಸಾಲ ವಿತರಣೆ ಮತ್ತು ಘಟಕ ತಪಾಸಣೆ:-**

ಜಿಲ್ಲಾ ವ್ಯವಸ್ಥಾಪಕರಿಂದ ಹಣ ಬಿಡುಗಡೆಗೆ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಕೇಂದ್ರ ಕಚೇರಿಯಲ್ಲಿ ಪರಿಶೀಲಿಸಿ ಸಾಲ ಮತ್ತು ಸಹಾಯಧನವನ್ನು ಫಲಾನುಭವಿಗಳ ಪರವಾಗಿ SHG ಯ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ವರ್ಗಾಯಿಸಬೇಕು ಹಾಗೂ ಹಣ ವರ್ಗಾಯಿಸಿರುವ ಬಗ್ಗೆ ಸಾಲ ಮಂಜೂರಾತಿ ಆದೇಶ ಹೊರಡಿಸುವುದು. SHGಯ ಆದೇಶದಲ್ಲಿ ತಿಳಿಸಿರುವಂತೆ ನಿಗಮದಿಂದ ಪಡೆದ ಸಾಲ ಮತ್ತು ಸಹಾಯಧನದ ಮೊತ್ತವನ್ನು ಸಂಬಂಧಿಸಿದ ಫಲಾನುಭವಿಗೆ ವಿತರಿಸಬೇಕು. ಫಲಾನುಭವಿಗಳು ಪಡೆದ ಮೊತ್ತದಿಂದ ಉದ್ದೇಶಿತ ಘಟಕವನ್ನು ಸ್ಥಾಪಿಸಿ ನಿರ್ವಹಿಸಬೇಕು. ಈ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು/ಸಹಾಯಕ ಪ್ರಧಾನ ವ್ಯವಸ್ಥಾಪಕರು ಪ್ರವಾಸದ ಸಮಯದಲ್ಲಿ ಘಟಕ ತಪಾಸಣೆ ಮಾಡಿ ಧೃಡೀಕರಿಸಿಕೊಳ್ಳಬೇಕು.

...4

9. **ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-** ಸಾಲದ ಭದ್ರತೆಗೆ ಈ ಕೆಳಕಂಡ ನಿಗಧಿತ ದಸ್ತಾವೇಜುಗಳನ್ನು ಫಲಾನುಭವಿಯಿಂದ/ಜಾಮೀನುದಾರರಿಂದ ಪಡೆಯಬೇಕು.

- ಪ್ರಾಮಿಸರಿ ನೋಟ್
- ಡಿ.ಪಿ.ನೋಟ್ ಡೆಲಿವರಿ ಲೆಟರ್ — ಫಲಾನುಭವಿಯಿಂದ
- ಲೆಟರ್ ಆಫ್ ರೀಪೆಮೆಂಟ್
- ಹೈಪಾಥಿಕೇಷನ್ ಡೀಡ್ – ರೂ.100 ಚಾಪಾ ಕಾಗದಲ್ಲಿ
- ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್ – ರೂ.100 ಚಾಪಾ ಕಾಗದಲ್ಲಿ
- ಲೆಟರ್ ಆಫ್ ಗ್ಯಾರಂಟಿ –ಜಾಮೀನುದಾರರಿಂದ(ರೂ.100ಚಾಪಾ ಕಾಗದದಲ್ಲಿ)
- ಸಾಲದ ಮರುಪಾವತಿ ಅವಧಿ ಪೂರ್ಣಗೊಳ್ಳುವ ಮೊದಲು ಫಲಾನುಭವಿ ಹಾಗೂ ಜಾಮೀನುದಾರರಿಂದ ಋಣದ ಒಪ್ಪಿಗೆ ಪತ್ರ (Acknowledgement of Debt) ಪಡೆಯುವುದು.
- ಸ್ವ-ಸಹಾಯ ಸಂಘಗಳಿಂದ Memorandum of Agreement ಅನ್ನು ರೂ.200/-ಗಳ ಚಾಪಾ ಕಾಗದದಲ್ಲಿ.

10. **ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-**

SHG/ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ಖಾತಾ ಪುಸ್ತಕದಲ್ಲಿ ದಾಖಲಿಸಿ ನಿರ್ವಹಿಸುವುದು.

11. **ವಿಮೆ:-**

ಈ ಯೋಜನೆಯಲ್ಲಿ ಪಡೆಯುವ ಸಾಲದಿಂದ ಉತ್ಪನ್ನವಾದ ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪಿಸಲು ಕಡ್ಡಾಯವಾಗಿ ವಿಮೆ ಮಾಡಿಸಬೇಕು. ವಿಮಾ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

12. **ಮರುಪಾವತಿ ಅವಧಿ:-**

ಅ) ಈ ಯೋಜನೆಯಲ್ಲಿ ಪಡೆದ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ 34 ಕಂತುಗಳಲ್ಲಿ ಮಂಜೂರಾತಿ ಆದೇಶದಲ್ಲಿ ನಿಗದಿ ಪಡಿಸಿದಂತೆ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸಬೇಕು. ಸಾಲದ ಮರುಪಾವತಿಗೆ 2 ತಿಂಗಳು ವಿರಾಮಾವಧಿ ನೀಡಲಾಗುತ್ತದೆ.

13. **ಡಿ.ಸಿ.ಬಿ.ತಯಾರಿಸಿ ಸಾಲ ವಸೂಲಾತಿಗೆ ಕ್ರಮ:-**

ಅ) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು ಮರುಪಾವತಿಸಬೇಕು. ವಿಳಂಬ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಿ ವಸೂಲಿ ಮಾಡಬೇಕು.

ಆ) ಸಾಲ ಮರುಪಾವತಿಸದೆ ಸುಸ್ಥಿಯಾದ ಫಲಾನುಭವಿಗಳಿಗೆ/SHG ಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು

13. **ನಿಯಮಗಳಿಗೆ ತಿದ್ದುಪಡಿ:-**

ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯಲ್ಲಿ ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು/ಸ್ಪಷ್ಟೀಕರಣ ನೀಡಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

15/1/20

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಅನುಬಂಧ-3

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ:15-09-2020 ರ ಮಾರ್ಗಸೂಚಿಗಳು

**ಶೈಕ್ಷಣಿಕ ಸಾಲ ಯೋಜನೆಯ ಮಾರ್ಗಸೂಚಿಗಳು ಮತ್ತು ಅನುಷ್ಠಾನದಲ್ಲಿ ಅನುಸರಿಸಬೇಕಾದ ವಿಧಾನಗಳು.**

* * *

ಹಿಂದುಳಿದ ವರ್ಗಗಳ ಪ್ರವರ್ಗ–1ರಲ್ಲಿ ಬರುವ ಅಲೆಮಾರಿ / ಅರೆಅಲೆಮಾರಿ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವೃತ್ತಿಪರ, ತಾಂತ್ರಿಕ, ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ) ಸೀಟು ಪಡೆದು ಕಾಲೇಜಿಗೆ ಸೇರ್ಪಡೆಯಾದವರಿಗೆ ವ್ಯಾಸಂಗ ಮುಂದುವರೆಸಲು ಅಗತ್ಯವಿರುವ ಹಣವನ್ನು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

**I. ಅರ್ಹತೆ.**

1. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು ಮತ್ತು ರಾಜ್ಯ ಸರ್ಕಾರವು ಅಂಗೀಕರಿಸಿ ಅಧಿಸೂಚಿಸಿರುವ ದಿನಾಂಕ:01-02-1966ರ ಸಂಖ್ಯೆ ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65 ಸರ್ಕಾರದ ಆದೇಶದಲ್ಲಿ ಗುರ್ತಿಸಿದ 1)ಬೈರಾಗಿ (ಬಾವ), 2)ಬಾಲ ಸಂತೋಷಿ–ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ–ಜೋಶಿ–ಗೋಂಧಳಿ, 6)ಚಾರ, 7)ಚಿತ್ರಕಥಿ–ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಾಟಿ, 19)ನಂದಿವಾಲ–ಜೋಷಿ–ಗೊಂದಳಿ, ಮುಲ್‌ಮಾಲ್ಲಿ, 20)ನಾಥಪಂಥಿ–ಡೌರಿ–ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ಡು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ–ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.
2. ವಿದ್ಯಾರ್ಥಿಯ ವಯಸ್ಸು 35 ವರ್ಷ ಮೀರಿರಬಾರದು.
3. ವಿದ್ಯಾರ್ಥಿ ಮತ್ತು ಅವರ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳನ್ನು ಮೀರಿರಬಾರದು.
4. ವಿದ್ಯಾರ್ಥಿಯು ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು.
5. ವಿದ್ಯಾರ್ಥಿಯು ಶೈಕ್ಷಣಿಕ ಉದ್ದೇಶಕ್ಕೆ ಇತರೆ ಯಾವುದೇ ಬ್ಯಾಂಕ್/ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿರಬಾರದು.

**II. ಸಾಲದ ಉದ್ದೇಶ ಮತ್ತು ಬಡ್ಡಿದರ:**

➢ **ಕರ್ನಾಟಕದಲ್ಲಿ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗಕ್ಕೆ ಆರ್ಥಿಕ ನೆರವು:**

ಈ ಮುಂದಿನ ವೆಚ್ಚಗಳಿಗೆ ಒಳಪಟ್ಟು ವಾರ್ಷಿಕ ಗರಿಷ್ಠ ರೂ.1,00,000/–ಗಳನ್ನು ಅಥವಾ ಉನ್ನತ ವ್ಯಾಸಂಗದ ವಾಸ್ತವಿಕ ಕೋರ್ಸ್ ವೆಚ್ಚದ **(Actual Fee)** ಮಿತಿಗೊಳಪಟ್ಟು ಸಾಲವನ್ನು ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಮಂಜೂರು ಮಾಡಲಾಗುವುದು.

1. ಪ್ರವೇಶ ಶುಲ್ಕ, ಬೋದನಾ ವೆಚ್ಚ, ಲ್ಯಾಬೊರೇಟರಿ ಫೀ, ಪರೀಕ್ಷಾ ಶುಲ್ಕ ಹಾಗೂ ಸರ್ಕಾರವು ನಿಗದಿಪಡಿಸಿದ ಇತ್ಯಾದಿ ಫೀಜುಗಳು. (ಕಾಲೇಜ್ ಪ್ರಿನ್ಸಿಪಾಲರಿಂದ Fee Structure ಪ್ರತಿಯನ್ನು ಪಡೆದು ವಿದ್ಯಾರ್ಥಿಯು ಸಲ್ಲಿಸಬೇಕು.)

2. ಪುಸ್ತಕಗಳು, ಸ್ಟೇಷನರಿ ಮತ್ತು ಉಪಕರಣಗಳನ್ನು ಕೊಳ್ಳುವ ವೆಚ್ಚ. (ಅಂದಾಜು ವೆಚ್ಚದ ಪಟ್ಟಿಯನ್ನು ಸಲ್ಲಿಸಬೇಕು.)
3. ವ್ಯಾಸಂಗಕ್ಕೆ ಅವಶ್ಯಕತೆಗೆ ಅನುಗುಣವಾಗಿ ಕಾಲೇಜಿನವರು ನಿಗದಿಪಡಿಸಿರುವ ಪ್ರವಾಸದ ವೆಚ್ಚ.
4. ಹಾಸ್ಟೆಲ್ ಫೀ. (ವಾಸವಿರುವ ಹಾಸ್ಟೆಲ್ ವಾರ್ಡನ್‌ರವರಿಂದ ವಾರ್ಷಿಕ ಅಂದಾಜು ವೆಚ್ಚದ ಬಗ್ಗೆ (Estimate) ಪ್ರತಿ ಸಲ್ಲಿಸಬೇಕು.

➢ **ವಿದೇಶಿ ವಿಶ್ವವಿದ್ಯಾಲಯಗಳಲ್ಲ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು:**

1. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ., ಪೋಸ್ಟ್ ಡಾಕ್ಟೋರಲ್ ಮತ್ತು ಮಾಸ್ಟರ್ ಡಿಗ್ರಿ ವ್ಯಾಸಂಗಕ್ಕೆ ಪ್ರವೇಶ ಹೊಂದಿದ ಪ್ರವರ್ಗ-1ರಲ್ಲಿ ಬರುವ ಅಲೆಮಾರಿ / ಅರೆಅಲೆಮಾರಿ ಮತ್ತು ಇದರ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸಾಲ ಒದಗಿಸುವುದು.
2. ಸಾಲದ ಮೊತ್ತ ವಾರ್ಷಿಕ ಗರಿಷ್ಠ ರೂ.5.00ಲಕ್ಷಗಳಂತೆ 3 ವರ್ಷಗಳ ಅವಧಿಗೆ ಶೇ.4ರ ಬಡ್ಡಿದರದಲ್ಲಿ ರೂ.15.00ಲಕ್ಷಗಳ ಸಾಲ ಒದಗಿಸುವುದು.

## III. ಸಾಲ ಮಂಜೂರು ಮಾಡುವ ಕೋರ್ಸುಗಳು:(Course Covered)

1. **ವೈದ್ಯಕೀಯ (Medical):-** (ಎಂ.ಸಿ.ಐ ನಿಂದ ಅಂಗೀಕೃತ ಮತ್ತು ರಾಜ್ಯದ ಯೂನಿವರ್ಸಿಟಿಗಳಿಗೆ ಅಫೀಲಿಯೇಟ್ ಆದ ಕಾಲೇಜ್‌ಗಳಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)
2. **ದಂತವೈದ್ಯಕೀಯ (Dental):-** (ಡಿ.ಸಿ.ಐ ನಿಂದ ಅಂಗೀಕೃತ ಮತ್ತು ರಾಜ್ಯದ ಯೂನಿವರ್ಸಿಟೀಸ್‌ಗಳಿಗೆ ಅಫೀಲಿಯೇಟ್ ಆದ ಕಾಲೇಜ್‌ಗಳಲ್ಲಿ ಬಿಡಿಎಸ್ ಕೋರ್ಸ್‌ಗೆ ಸಿಇಟಿ ಮೂಲಕ ಪ್ರವೇಶ ಪಡೆದವರು)
3. **ಇಂಜಿನಿಯರಿಂಗ್/ಟೆಕ್ನಾಲಜಿ/ಆರ್ಕಿಟೆಕ್ಚರ್:-**(ಎ.ಐ.ಸಿ.ಟಿ.ಇ ಯಿಂದ ಅಂಗೀಕೃತ ಮತ್ತು ಸರ್ಕಾರಿ ಕಾಲೇಜು/ಸರ್ಕಾರದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಬಿ.ಇ ಕೋರ್ಸ್‌ಗಳಿಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)
4. **ಐ.ಎಸ್.ಎಂ ಮತ್ತು ಹೆಚ್:-** (ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ ಮತ್ತು ಹೋಮಿಯೋಪತಿ) (ಸರ್ಕಾರದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಬಿಯುಎಂಎಸ್, ಬಿಎಎಂಎಸ್, ಬಿಹೆಚ್‌ಎಂಎಸ್ ಕೋರ್ಸ್‌ಗಳಿಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)
5. **ವೃತ್ತಿಪರ ಕೋರ್ಸ್‌ಗಳಾದ ಕಂಪನಿ ಸೆಕ್ರೆಟರಿ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ಕಾಸ್ಟ್ & ವರ್ಕ್ಸ್ ಅಕೌಂಟೆಂಟ್:-** (ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ/ ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಆಡ್ ವರ್ಕ್ಸ್ ಅಕೌಂಟೆಂಟ್ಸ್/ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಸಂಸ್ಥೆಗಳಲ್ಲಿ ರಿಜಿಸ್ಟ್ರೇಷನ್ ಮತ್ತು ಈ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದವರು.)
6. **ಎಂ.ಸಿ.ಎ., ಎಲ್.ಎಲ್.ಎಂ., ಎಂ.ಫಾರ್ಮ, ಎಂ.ಡಿ., ಎಂ.ಇ., ಎಂ.ಟೆಕ್., ಎಂ.ಬಿ.ಎ., ಪಿ.ಹೆಚ್.ಡಿ ಇತ್ಯಾಧಿ ಉನ್ನತ ವ್ಯಾಸಂಗದ ಕೋರ್ಸ್‌ಗಳು:-**(ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಸಿಇಟಿ ಅಥವಾ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆದವರು.)
7. **ಬಿ.ಎಸ್.ಸಿ ಪ್ಯಾರಾ ಮೆಡಿಕಲ್ & ಬಿ.ಎಸ್.ಸಿ. ಬಯೋಟೆಕ್:-** (ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆದವರು)
8. **ಡಿಪ್ಲಮೋ, ಐ.ಟಿ.ಐ, ನರ್ಸಿಂಗ್, ಬಿ.ಎ, ಬಿ.ಎಸ್ಸಿ, ಡಿ.ಇಡಿ ಮತ್ತು ಬಿ.ಇಡಿ:-**(ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಸಿಇಟಿ ಅಥವಾ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆದವರು.)
9. ಇತ್ಯಾದಿ ಕೋರ್ಸ್‌ಗಳ ಪಟ್ಟಿಯನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ನೀಡಿದೆ.

....3

**IV. ಸಾಲ ಪಡೆಯಲು ಅರ್ಜಿ ಮತ್ತು ಸಲ್ಲಿಸಬೇಕಾದ ಪ್ರಾಥಮಿಕ ದಾಖಲಾತಿಗಳು:-**

ಸಾಲ ಪಡೆಯ ಬಯಸುವ ವಿದ್ಯಾರ್ಥಿಗಳು ನಿಗಮವು ನಿಗದಿಪಡಿಸಿದ ಅರ್ಜಿ ನಮೂನೆಯನ್ನು ವಿದ್ಯಾರ್ಥಿಗಳು ವಾಸಿಸುತ್ತಿರುವ ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯಿಂದ ಪಡೆದುಕೊಳ್ಳಬೇಕು. ಅರ್ಜಿಯಲ್ಲಿ ಪೂರ್ಣ ಮಾಹಿತಿಯನ್ನು ಭರ್ತಿಮಾಡಿ, ಭರ್ತಿಮಾಡಿದ ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ವಿದ್ಯಾರ್ಥಿಗಳು ವಾಸಿಸುತ್ತಿರುವ ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು.

1. ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪೂರ್ಣವಾಗಿ ಭರ್ತಿಮಾಡಬೇಕು. ಅಪೂರ್ಣ ಮಾಹಿತಿಯುಳ್ಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಹಿಂದುಳಿದ ವರ್ಗಕ್ಕೆ ಸೇರಿರುವ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದಿಂದ (ತಹಶೀಲ್ದಾರ್) ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಸಲ್ಲಿಸಬೇಕು.
3. ವಿದ್ಯಾರ್ಥಿಯ ಖಾಯಂ ವಾಸದ ದೃಢೀಕರಣಕ್ಕೆ ಆಧಾರ ಕಾರ್ಡ್/ಪಡಿತರ ಚೀಟಿ/ಚುನಾವಣ ಗುರುತಿನ ಚೀಟಿಯ ದೃಢೀಕೃತ ಪ್ರತಿ ಅಥವಾ ಗ್ರಾಮ ಲೆಕ್ಕಾಧಿಕಾರಿಯಿಂದ ನೀಡಿರುವ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸಬೇಕು.
4. ವಿದ್ಯಾರ್ಥಿಯು ವ್ಯಾಸಂಗದ ಉದ್ದೇಶಕ್ಕೆ ಸೇವಾವಲಯದ ವ್ಯಾಪ್ತಿಯಲ್ಲಿ ಬರುವ ಇತರೆ ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳಿಂದ ಸಾಲದ ನೆರವು ಪಡೆಯದೆ ಇರುವ ಬಗ್ಗೆ ಬೇಬಾಕಿ ಪತ್ರ ನೀಡಬೇಕು. ಆಯ್ಕೆಯಾದ ನಂತರ ನೀಡುವುದು.
5. ವಿದ್ಯಾರ್ಥಿಯು ಈ ಸಾಲ ಪಡೆಯುವ ಬಗ್ಗೆ ವಿದ್ಯಾರ್ಥಿಯ ತಂದೆ/ತಾಯಿ/ ಪೋಷಕರು/ಜಾಮೀನುದಾರರ ಒಪ್ಪಿಗೆ ಪತ್ರ ಮತ್ತು ಅವರುಗಳ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಗೆ ಅಂಟಿಸಬೇಕು.
6. ವಿದ್ಯಾರ್ಥಿಯ ವಯಸ್ಸಿನ ದೃಢೀಕರಣಕ್ಕೆ ಎಸ್.ಎಸ್.ಎಲ್.ಸಿ. ಮಾರ್ಕ್ಸ್‌ಕಾರ್ಡ್ ಅಥವಾ ಟಿಸಿಯ ದೃಢೀಕೃತ ದಾಖಲಾತಿಯನ್ನು ಒದಗಿಸಬೇಕು.
7. ವಿದ್ಯಾರ್ಥಿಯ ಪಾಸ್ ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು.
8. ಕಳೆದ ಸಾಲಿನ ಶೈಕ್ಷಣಿಕ ಕೋರ್ಸ್‌ಗಳಲ್ಲಿ ಪಾಸಾಗಿರುವ ಬಗ್ಗೆ ಅಂಕಪಟ್ಟಿಗಳ ದೃಢೀಕರಣ ಪ್ರತಿಗಳು.
9. ವಿದ್ಯಾರ್ಥಿಯು ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಸಿಇಟಿಯ ಪ್ರವೇಶ ಪತ್ರ/ಸಂಬಂಧಿಸಿದ ಪ್ರಾಧಿಕಾರವು ನಡೆಸಿದ ಪ್ರವೇಶ ಪರೀಕ್ಷೆಯ ಮೂಲಕ ಕಾಲೇಜುಗಳಿಗೆ ಪ್ರವೇಶ ಪತ್ರ ಪಡೆದಿರುವ ಬಗ್ಗೆ ಸದರಿ ಸರ್ಟಿಫಿಕೇಟ್ ಪ್ರತಿಯನ್ನು ಲಗತ್ತಿಸಬೇಕು.
10. ಸಿಇಟಿ ಅಥವಾ ಸಂಬಂಧಿಸಿದ ಪ್ರಾಧಿಕಾರದಿಂದ ಆಯ್ಕೆಯಾದ ನಂತರ ಕಾಲೇಜು ಪ್ರವೇಶ ಪಡೆದ ಬಗ್ಗೆ ಪ್ರಾಂಶುಪಾಲರಿಂದ ನೀಡಲ್ಪಟ್ಟ Admission Certificate/Study Certificate ದೃಢೀಕರಣ ಪತ್ರ.
11. ವಾರ್ಷಿಕ ಖರ್ಚು ವೆಚ್ಚದ ಬಗ್ಗೆ ಕಾಲೇಜು ಮುಖ್ಯಸ್ಥರಿಂದ ಫೀ ಸ್ಟಕ್ಚರ್ ಸರ್ಟಿಫಿಕೇಟ್. ವಿದ್ಯಾರ್ಥಿ ನಿಲಯದಲ್ಲಿ (ಹಾಸ್ಟೆಲ್) ವಾಸ್ತವ್ಯವಿದ್ದಲ್ಲಿ ಆ ಹಾಸ್ಟೆಲ್ ವಾರ್ಡನ್/ಮ್ಯಾನೇಜರ್ ರವರಿಂದ ವಾರ್ಷಿಕ ಅಂದಾಜು ವೆಚ್ಚದ ಪತ್ರ.
12. ವಿದ್ಯಾರ್ಥಿಯು ವ್ಯಾಸಂಗದ ಪೂರ್ಣ ಅವಧಿಗೆ ಪಡೆಯುವ ಸಾಲದ ಮೊತ್ತಕ್ಕೆ ಮರುಪಾವತಿ ಭದ್ರತೆಗಾಗಿ ವಿದ್ಯಾರ್ಥಿ ಮತ್ತು ತಂದೆ/ಪೋಷಕರು ರೂ.200/-ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ (Indemnity Bond) ಬರೆದು ಕೊಡುವುದು ಹಾಗೂ ಜಾಮೀನು ನೀಡುವ ವ್ಯಕ್ತಿಯಿಂದ Surety's Affidavit ರೂ.100/-ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದು ಕೊಡುವುದು. ವಿದ್ಯಾರ್ಥಿಯ ತಂದೆ ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರದ ಘೋಷಣೆ ಸಲ್ಲಿಸುವುದು.
13. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಪಡೆಯಲು ಬಯಸುವ ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ವಿಶ್ವವಿದ್ಯಾಲಯಗಳ ಪ್ರವೇಶ ಪತ್ರ, ವೀಸಾ, ಪಾಸ್ಪೋರ್ಟ್, ಏರ್

..4

ಟಿಕೇಟ್, ವಿಶ್ವವಿದ್ಯಾಲಯ ನಿಗಧಿಪಡಿಸಿದ ಶುಲ್ಕದ ಬಗ್ಗೆ (Fee Structure) ಇತ್ಯಾದಿ ವೆಚ್ಚಗಳ ದಾಖಲಾತಿಗಳನ್ನು ಸಲ್ಲಿಸುವುದು.

14. ವಿದೇಶಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಕ್ಕೆ ಮಂಜೂರು ಮಾಡುವ ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯ ದಾಖಲೆಗಳು. ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಗೆ ಸಂಬಂಧಿಸಿದ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಒದಗಿಸಬೇಕು.
    - ಸಾಲದ ಭದ್ರತೆಗೆ ನೀಡುವ ಸ್ಥಿರಾಸ್ತಿಯ ಮೂಲ ಪತ್ರ.
    - ಮ್ಯುಟೇಶನ್ ರೆಜಿಸ್ಟರ್ ಎಕ್ಸ್ಟ್ರಾಕ್ಟ್
    - ಪಿತ್ರಾರ್ಜಿತ ಆಸ್ಥಿಯಾಗಿದ್ದಲ್ಲಿ 1. ಆಸ್ತಿ ವಿಭಾಗ ಪತ್ರ. 2.ಎಂ.ಆರ್.ಕಾಪಿ.
    - ಜಮೀನು ಆಗಿದ್ದಲ್ಲಿ ಚಾಲ್ತಿ ವರ್ಷದ ಪಹಣಿ ಪತ್ರ ಮತ್ತು ಲಾವಣಿ ಪತ್ರ.
    - ಚಾಲ್ತಿ ವರ್ಷದವರೆಗೆ ಕಂದಾಯ ಪಾವತಿಸಿದ ರಶೀದಿ.
    - ಖಾತಾ ಎಕ್ಸ್ಟ್ರಾಕ್ಟ್ ಮತ್ತು ಪಟ್ಟಾ ಪುಸ್ತಕ
    - ಸ್ಥಿರಾಸ್ತಿಯ ಚೆಕ್ ಬಂದಿ.
    - ಇ.ಸಿ(13 ವರ್ಷಗಳದ್ದು, ನಮೂನೆ-15ರಲ್ಲಿ).
    - ಉಪನೋಂದಣಾಧಿಕಾರಿಗಳಿಂದ ಪಡೆದ ಸ್ಥಿರಾಸ್ತಿಯ ಮೌಲ್ಯ ನಿರ್ಣಯ ವರದಿ.

15. ಜಾಮೀನುದಾರರ ಒಪ್ಪಿಗೆ ಪತ್ರ(ನೋಟರಿ ಮಾಡಿಸಿರಬೇಕು).

16. ಅರ್ಜಿದಾರರು/ಜಾಮೀನುದಾರರ ವಂಶವೃಕ್ಷ (ವಂಶವೃಕ್ಷದಲ್ಲಿ ತೋರಿಸಿರುವ ಕಾನೂನು ಬದ್ಧ ಹಕ್ಕುದಾರರಿಂದ ಆಸ್ತಿಯನ್ನು ನಿಗಮಕ್ಕೆ ಆಧಾರ ಮಾಡುವ ಬಗ್ಗೆ ಒಪ್ಪಿಗೆ ಪತ್ರ(ನೋಟರಿ ಮಾಡಿಸಿರಬೇಕು).

**V. ಫಲಾನುಭವಿಗಳ ಆಯ್ಕೆ ಸಮಿತಿಯು ಈ ಕೆಳಕಂಡಂತೆ ಇರುತ್ತದೆ:-** ಈ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ರಚಿಸಿದೆ.

| ಕ್ರ. ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

**VI. ಆಯ್ಕೆಯ ವಿಧಾನ:-**

ಕರ್ನಾಟಕ ಅಲೆಮಾರಿ ಮತ್ತು ಅರೆಅಲೆಮಾರಿ ಅಭಿವೃದ್ಧಿ ನಿಗಮವು ಪ್ರತಿ ವರ್ಷ ಕಾಲೇಜುಗಳು ಪ್ರಾರಂಭವಾದ ನಂತರ ಆರ್ಥಿಕ ನೆರವು ಒದಗಿಸುವ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸುವುದು ಹಾಗೂ ಪತ್ರಿಕಾ ಪ್ರಕಟಣೆಯನ್ನು ಆಯಾ ಜಿಲ್ಲೆಯಲ್ಲಿರುವ ಕಾಲೇಜಿಗಳ ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು. ಪ್ರಕಟಣೆ ಮೇರೆಗೆ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿ

ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ಸಂಬಂಧಿಸಿದ ಕೋರ್ಸಿನ ಪೂರ್ಣಾವಧಿಗೆ ಅಗತ್ಯವಿರುವ ಒಟ್ಟು ಸಾಲದ ಮೊತ್ತಕ್ಕೆ ಒಂದೇ ಬಾರಿಗೆ ಸಾಲದ ಮಂಜೂರಾತಿಯನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ/ಮಂಜೂರಾತಿ ಪಡೆಯುವುದು. ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳ ಎಲ್ಲಾ ದಾಖಲಾತಿಗಳೊಂದಿಗೆ ಅರ್ಜಿಯನ್ನು ಪ್ರಸ್ತಾವನೆ ಸಹಿತ ನಿಗಮಕ್ಕೆ ಸಾಲ ಬಿಡುಗಡೆಗೆ ಆಯ್ಕೆ ಸಮಿತಿಯು ಕಳುಹಿಸಿ ಕೊಡುತ್ತದೆ. ನಿಗಮದ ಕೇಂದ್ರ/ವಿಭಾಗ ವ್ಯವಸ್ಥಾಪಕರ ಕಛೇರಿಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಕ್ರಮ ವಹಿಸುತ್ತದೆ.

**VII. ಮೀಸಲಾತಿ:-**

ಈ ಯೋಜನೆಯಲ್ಲಿ ಪ್ರವರ್ಗ-1ರಲ್ಲಿ ಬರುವ ಅಲೆಮಾರಿ / ಅರೆಅಲೆಮಾರಿ ಮತ್ತು ಇದರ ಎಲ್ಲಾ ಉಪಜಾತಿಗಳಿಗೆ ಪ್ರಾತಿನಿದ್ಯತೆ ನೀಡಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

**VIII. ಸಾಲ ವಿತರಿಸುವಿಕೆ:-**

ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಆಯ್ಕೆ ಮಾಡಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆ ಮತ್ತು ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ನಿಗಮವು ಪ್ರಥಮ ಹಂತದಲ್ಲಿ 1ನೇ ಕಂತಿನ ಸಾಲವನ್ನು ಮಂಜೂರು ಮಾಡಿ ಮಂಜೂರು ಮಾಡಿದ ಸಾಲದ ಮೊತ್ತಕ್ಕೆ ವಿದ್ಯಾರ್ಥಿಯ ಹೆಸರಿನಲ್ಲಿ ಚೆಕ್ ಮೂಲಕ ಹಣವನ್ನು ಬಿಡುಗಡೆ ಮಾಡಿ ಮಂಜೂರಾತಿ ಪತ್ರದೊಂದಿಗೆ ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತದೆ. ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಯವರು ನಿಗಮವು ಸಿದ್ಧಪಡಿಸಿದ ದಸ್ತಾವೇಜುಗಳ ನಿಗದಿತ ನಮೂನೆಗಳಲ್ಲಿ ಸಾಲದ ಭದ್ರತಾ ದಾಖಲಾತಿಗಳಿಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ತಂದೆ, ತಾಯಿ/ಪೋಷಕರು/ಜಾಮೀನುದಾರರಿಂದ ಸಹಿ ಪಡೆದು ಸಾಲದ ಮೊತ್ತದ ಚೆಕ್‌ನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮವಹಿಸುತ್ತಾರೆ. ವಿದ್ಯಾರ್ಥಿಗೆ ನಿಗಮದಿಂದ ಸಾಲ ಮಂಜೂರಾಗಿರುವ ಬಗ್ಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಗಮನಕ್ಕೆ ತರಲಾಗುತ್ತದೆ.

ಎರಡನೇ ಮತ್ತು ನಂತರದ ಕಂತಿನ ಸಾಲ ಬಿಡುಗಡೆ ಮಾಡಲು ಸಾಲ ಪಡೆದ ವಿದ್ಯಾರ್ಥಿಯು ಆಯಾ ವರ್ಷ ನಿಗದಿಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಮುಂದಿನ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡಲು ಅರ್ಹತೆ ಪಡೆದಿರಬೇಕು.

1. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು 2/3/4/5ನೇ ಸೆಮಿಸ್ಟರ್‌ನಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಬಗ್ಗೆ ಪ್ರಾಂಶುಪಾಲರಿಂದ ನೀಡಲ್ಪಟ್ಟ ಸ್ಟಡಿ ಸರ್ಟಿಫಿಕೇಟ್/ವ್ಯಾಸಂಗ ದೃಢೀಕರಣ ಪತ್ರ.
2. ವಿದ್ಯಾರ್ಥಿಯು ಹಿಂದಿನ ವರ್ಷಗಳ ಸೆಮಿಸ್ಟರ್‌ಗಳಲ್ಲಿ ತೇರ್ಗಡೆಯಾಗಿರುವ ಬಗ್ಗೆ ಅಂಕಪಟ್ಟಿ (ದೃಢೀಕೃತ ನಕಲು)
3. ಇಂಜಿನಿಯರಿಂಗ್ ಕೋರ್ಸ್‌ಗಳಿಗೆ 1ನೇ ಸೆಮಿಸ್ಟರ್, 3ನೇ ಸೆಮಿಸ್ಟರ್, 5ನೇ ಸೆಮಿಸ್ಟರ್ ಮತ್ತು 7ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದಿದ್ದಲ್ಲಿ ಕ್ರಮವಾಗಿ 1, 2, 3 ಮತ್ತು 4ನೇ ವರ್ಷಗಳಿಗೆ ಸಾಲ ಮಂಜೂರು ಮಾಡಬೇಕು.
4. ನಂತರದ ಕಂತಿನ ಸಾಲ ಬಿಡುಗಡೆ ಮಾಡುವ ಬಗ್ಗೆ ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರ ಅಥವಾ ಜಾಮೀನುದಾರರಿಂದ ಒಪ್ಪಿಗೆ ಪತ್ರ.
5. ಹಿಂದಿನ ವರ್ಷ ನಿಗಮದಿಂದ ಬಿಡುಗಡೆಯಾದ ಸಾಲದ ಕಂತನ್ನು ವಿದ್ಯಾರ್ಥಿಗೆ ವಿತರಣೆ ಮಾಡಿರುವ ಬಗ್ಗೆ ಹಣ ಸಂದಾಯ ರಶೀದಿ.(ಜಿಲ್ಲಾ ವ್ಯವಸ್ಥಾಪಕರು ನೀಡಬೇಕು).
6. 2/3/4/5ನೇ ಕಂತುಗಳ ಸಾಲ ಬಿಡುಗಡೆಗೆ ಕ್ರಮವಾಗಿ 1/2/3/4ನೇ ಕಂತುಗಳ ಸಾಲಕ್ಕೆ ನಿಗದಿತ ಭದ್ರತಾ ದಾಖಲಾತಿಗಳನ್ನು ಪಡೆದುಕೊಂಡು ಸುಸ್ಥಿತಿಯಲ್ಲಿಟ್ಟಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ದೃಢೀಕರಣ ನೀಡಬೇಕು.

...6

ಜಿಲ್ಲಾ ವ್ಯವಸ್ಥಾಪಕರು ವಿದ್ಯಾರ್ಥಿಯು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ವಿದ್ಯಾರ್ಥಿಯು ಮುಂದಿನ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಮೇಲ್ಕಂಡ ದಾಖಲಾತಿಗಳೊಂದಿಗೆ ನಂತರದ ಕಂತಿನ ಸಾಲವನ್ನು ಬಿಡುಗಡೆ ಮಾಡಲು ಕೋರಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಇದಕ್ಕೆ ಪುನಃ ಜಿಲ್ಲಾ ಸಮಿತಿಯ ಅನುಮೋದನೆ ಪಡೆಯಬೇಕಾಗಿರುವುದಿಲ್ಲ. ಮೊದಲನೆ ಭಾರಿಗೆ ಎಲ್ಲಾ ವರ್ಷಗಳಿಗೆ ಬೇಕಾಗುವ ಒಟ್ಟು ಸಾಲದ ಮೊತ್ತಕ್ಕೆ ಜಿಲ್ಲಾ ಸಮಿತಿಯಿಂದ ಅನುಮೋದನೆ ಪಡೆಯುವುದು.

## IX. ಸಾಲದ ಭದ್ರತಾ ದಾಖಲಾತಿಗಳು:-

ನಿಗಮವು ಮಂಜೂರು ಮಾಡುವ ಒಟ್ಟು ಸಾಲದ ಮೊತ್ತಕ್ಕೆ ವಿದ್ಯಾರ್ಥಿ ಹಾಗೂ ಜಾಮೀನುದಾರರಿಂದ ಈ ಕೆಳಕಂಡ ಭದ್ರತಾ ದಾಖಲಾತಿಗಳಿಗೆ ಸಹಿ ಪಡೆಯಬೇಕು.

| | | | |
|---|---|---|---|
| 1. | ಪ್ರಾಮಿಸರಿ ನೋಟ್ | ಅನುಬಂಧ-1 | |
| 2. | ಡಿ.ಪಿ. ನೋಟ್ ಡೆಲಿವರಿ ಲೆಟರ್ | ಅನುಬಂಧ-2 | (ವಿದ್ಯಾರ್ಥಿಯಿಂದ) |
| 3. | ಪ್ರತಿಫಲ ರಶೀದಿ (Consideration Receipt) | ಅನುಬಂಧ-4 | |
| 4. | ಮರುಪಾವತಿ ಪತ್ರ (Letter of Repayment) | ಅನುಬಂಧ-3 | |
| 5. | ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್ | ಅನುಬಂಧ-5 | |
| 6. | ಲೆಟರ್ ಆಫ್ ಗ್ಯಾರೆಂಟಿ | ಅನುಬಂಧ-6 | (ಜಾಮೀನುದಾರರಿಂದ) |
| 7. | Indemnity Bond | | (ವಿದ್ಯಾರ್ಥಿ/ತಂದೆ/ ಪೋಷಕರು) |
| 8 | Surety's Affidavit | | (ಜಾಮೀನುದಾರರಿಂದ) |
| 9 | ವಿದೇಶಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಸಾಲದ ಭದ್ರತೆಗೆ ಒದಗಿಸುವ ಸ್ಥಿರಾಸ್ತಿಯನ್ನು ನಿಗಮಕ್ಕೆ ಆಧಾರ ಮಾಡಿಕೊಡಬೇಕು. (Simple Registered Mortgage deed) | | |

## X. ಬಡ್ಡಿಯ ದರ:-

ವೃತ್ತಿಪರ ಕೋರ್ಸ್‌ಗಳಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಶೈಕ್ಷಣಿಕ ಸಾಲದ ಮೊತ್ತಕ್ಕೆ ವಾರ್ಷಿಕವಾಗಿ ಶೇ.2ರ ಬಡ್ಡಿ ವಿಧಿಸಲಾಗುತ್ತದೆ.

ವಿದೇಶಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಶೈಕ್ಷಣಿಕ ಸಾಲಕ್ಕೆ ಶೇ.4ರ ಬಡ್ಡಿ ವಿಧಿಸಲಾಗುವುದು.

ಈ ಯೋಜನೆಯಲ್ಲಿ ಹಂತ ಹಂತವಾಗಿ ಸಾಲ ಬಿಡುಗಡೆ ಮಾಡುವುದರಿಂದ ಬಿಡುಗಡೆಯಾದ ಮೊತ್ತಕ್ಕೆ ಮಾತ್ರ ಬಡ್ಡಿ ವಿಧಿಸಲಾಗುವುದು. ಸುಸ್ಥಿಯಾದ ಸಾಲಕ್ಕೆ ಶೇ.2ರ ಸುಸ್ಥಿ ಬಡ್ಡಿಯನ್ನು ವಿಧಿಸಲಾಗುತ್ತದೆ.

## XI. ಮರುಪಾವತಿಯ ಅವಧಿ:-

ಅ. ಕರ್ನಾಟಕದಲ್ಲಿ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗಕ್ಕೆ ಸಾಲ ಪಡೆದ ವಿದ್ಯಾರ್ಥಿಯು ಕೋರ್ಸ್ ಪೂರ್ಣಗೊಂಡ 4ನೇ ತಿಂಗಳಿಂದ ಮರುಪಾವತಿಯ ಕಂತುಗಳು ತಾನಾಗಿಯೇ ಪ್ರಾರಂಭವಾಗುತ್ತವೆ. ಮರುಪಾವತಿಯ ಅವಧಿ 3 ವರ್ಷಗಳು. ಪ್ರತಿ ತಿಂಗಳು ಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಮತ್ತು ಸರಾಸರಿ ಬಡ್ಡಿಯನ್ನು ಸೇರಿಸಿ ಮರುಪಾವತಿ ಕಂತನ್ನು ನಿಗದಿಪಡಿಸಲಾಗುವುದು.

ವಿದ್ಯಾರ್ಥಿಯು ಸಾಲ ಪಡೆದು ವ್ಯಾಸಂಗವನ್ನು ಅವಧಿ ಮದ್ಯದಲ್ಲಿಯೇ ನಿಲ್ಲಿಸಿದರೆ, ಅಥವಾ ಅನುತ್ತೀರ್ಣರಾಗಿ ವ್ಯಾಸಂಗ ಬಿಟ್ಟರೆ ಅಲ್ಲಿಯವರೆಗೆ ನಿಗಮದಿಂದ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲದ ಕಂತುಗಳ ಒಟ್ಟು ಮೊತ್ತವನ್ನು ಶೇ4%ರ ಬಡ್ಡಿಯೊಂದಿಗೆ ನಾಲ್ಕು ಕಂತುಗಳಲ್ಲಿ, ಎರಡು ವರ್ಷಗಳಲ್ಲಿ ವಸೂಲಿ ಮಾಡುವುದು.

**ಆ.** ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪಡೆದ ಸಾಲವನ್ನು ಗರಿಷ್ಠ 60 ಮಾಸಿಕ ಕಂತುಗಳು ವ್ಯಾಸಂಗ ಪೂರ್ಣಗೊಂಡ 6 ತಿಂಗಳ ನಂತರ ಅಥವಾ ಉದ್ಯೋಗ ದೊರೆತ 3 ತಿಂಗಳ ನಂತರ ಮರುಪಾವತಿ ಕಂತು ಪ್ರಾರಂಭವಾಗುತ್ತದೆ.

**XII. ಯೋಜನೆಯ ಮೌಲ್ಯೀಕರಣ:–**

ವಿದ್ಯಾರ್ಥಿಯು ಈ ಯೋಜನೆಯಲ್ಲಿ ಸಾಲ ಪಡೆದು ವಿದ್ಯಾಭ್ಯಾಸ ಮುಗಿಸಿದ ನಂತರ ಮತ್ತು ಉದ್ಯೋಗ ದೊರೆತ ನಂತರ ವಿದ್ಯಾರ್ಥಿಯು ಉದ್ಯೋಗದಲ್ಲಿರುವ ಇಲಾಖೆ, ಹುದ್ದೆ ಹಾಗೂ ಪಡೆಯುತ್ತಿರುವ ವೇತನ ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ವಿವರಗಳನ್ನು ಅಥವಾ ಸ್ವಯಂ ಉದ್ಯೋಗ ಕೈಗೊಂಡಿರುವುದರ ಬಗ್ಗೆ ವಿವರಗಳನ್ನು ಕರ್ನಾಟಕ ಅಲೆಮಾರಿ ಮತ್ತು ಅರೆಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಮಾಹಿತಿ ನೀಡಬೇಕು.

15/9/12

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಅನುಬಂಧ–3

### ಶೈಕ್ಷಣಿಕ ಸಾಲ ಯೋಜನೆಯಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ವೃತ್ತಿಪರ ಕೋರ್ಸ್‌ಗಳ ವಿವರ

| ಕ್ರ.ಸ | ಕೋರ್ಸ್‌ನ ಹೆಸರು |
|---|---|
| 1 | ಬಿ.ಇ.(ಸಿ.ಇ.ಟಿ) |
| 2 | ಎಂ.ಬಿ.ಬಿ.ಎಸ್. |
| 3 | ಬಿ.ಯೂ.ಎಂ.ಎಸ್.(ಸಿ.ಇ.ಟಿ) (Bachelor of Unani Medicine and Surgery) |
| 4 | ಬಿ.ಡಿ.ಎಸ್(ಸಿ.ಇ.ಟಿ) |
| 5 | ಬಿ.ಎ.ಎಂ.ಎಸ್.(ಸಿ.ಇ.ಟಿ) (Bachelor of Ayurvedic Medicine and Surgery) |
| 6 | ಬಿ.ಎಚ್.ಎಂ.ಎಸ್(ಸಿ.ಇ.ಟಿ.) (Bachelor of Homeopathic Medicine and Surgery) |
| 7 | ಎಂ.ಬಿ.ಎ.(ಸಿ.ಇ.ಟಿ) |
| 8 | ಎಂ.ಟೆಕ್(ಸಿ.ಇ.ಟಿ) |
| 9 | ಎಂ.ಇ. (Master of Engineering)) |
| 10 | ಎಂ.ಡಿ. Doctor of Medicine |
| 11 | ಪಿ.ಹೆಚ್.ಡಿ. |
| 12 | ಬಿ.ಸಿ.ಎ/ಎಂ.ಸಿ.ಎ. |
| 13 | ಎಂ.ಎಸ್.ಆಗ್ರಿಕಲ್ಚರ್ |
| 14 | ಬಿ.ಎಸ್.ಸಿ. ನರ್ಸಿಂಗ್ |
| 15 | ಬಿ.ಫಾರಂ./ಎಂ.ಫಾರಂ |
| 16 | ಬಿ.ಎಸ್.ಸಿ. ಪ್ಯಾರಾ ಮೆಡಿಕಲ್ |
| 17 | ಬಿ.ಎಸ್.ಸಿ. ಬಯೋ ಟೆಕ್ನಾಲಜಿ |
| 18 | ಬಿ.ಟೆಕ್ |
| 19 | ಬಿ.ಪಿ.ಟಿ (Bachelor of Physio Therapy) |
| 20 | ಬಿ.ವಿ.ಎಸ್.ಸಿ/ಎಂ.ವಿ.ಎಸ್.ಸಿ. (Bachelor of Veterinary Science/Master of Veterinary Science) |
| 21 | ಜಿ.ಎನ್.ಎಂ. (General Nursing and Midwifery Course) |
| 22 | ಬಿ.ಹೆಚ್.ಎಮ್. (Bachelor Degree in Hotel Management) |
| 23 | ಎಂ.ಡಿ.ಎಸ್. (Master of Dental Surgery) |
| 24 | ಎಂ.ಎಸ್.ಡಬ್ಲ್ಯೂ (Master of Social Work) |
| 25 | ಎಲ್.ಎಲ್.ಎಂ. |
| 26 | ಎಂ.ಎಫ್.ಎ.(Master of Finance and Accounting) |
| 27 | ಎಂ.ಎಸ್ಸಿ ಬಯೋ ಟೆಕ್ನಾಲಜಿ |
| 28 | ಎಂ.ಎಸ್ಸಿ(ಎಜಿ) |
| 29 | ಎಂ.ಕಾಂ |

| | |
|---|---|
| 30 | ಎಂ.ಎಸ್ಸಿ |
| 31 | ಡಿಪ್ಲಮೋ |
| 32 | ಐ.ಟಿ.ಐ |
| 33 | ನರ್ಸಿಂಗ್ |
| 34 | ಬಿ.ಎ |
| 35 | ಬಿ.ಎಸ್ಸಿ |
| 36 | ಎಂ.ಎ |
| 37 | ಡಿ.ಇಡಿ |
| 38 | ಬಿ.ಇಡಿ |

**ಅನುಬಂಧ–**

**ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು ನೀಡುವ ಕೋರ್ಸ್‌ಗಳು.**

| ಕ್ರ.ಸ | ಕೋರ್ಸ್‌ನ ಹೆಸರು |
|---|---|
| 1 | ಪಿ.ಹೆಚ್‌ಡಿ |
| 2 | ಪೋಸ್ಟ್ ಡಾಕ್ಟೋರಲ್ |
| 3 | ಮಾಸ್ಟರ್ ಡಿಗ್ರಿ |
| 4 | ತಾಂತ್ರಿಕ ಮತ್ತು ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳು |

## ಅನುಬಂಧ-4

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ: -09-2020 ರ ಮಾರ್ಗಸೂಚಿಗಳು

### ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಮಾರ್ಗಸೂಚಿಗಳು:

****

**ಪ್ರಸ್ತಾವನೆ:-**

ಸನ್ಮಾನ್ಯ ಮುಖ್ಯಮಂತ್ರಿಯವರ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-169ರಲ್ಲಿ **"ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.25.00ಕೋಟಿ ಅನುದಾನ ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 262 ಬಿಸಿಎ 2018, ದಿನಾಂಕ:28/01/2019 ಮತ್ತು 13/02/2020ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:27/02/2020ರಂದು ನೋಂದಾಯಿಸಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನದಿಂದ ಅಲೆಮಾರಿ / ಅರೆಅಲೆಮಾರಿ ಜನಾಂಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಅನುಷ್ಠಾನಗೊಳಿಸುವ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆಯ ಮಾರ್ಗಸೂಚಿಗಳು ಈ ಕೆಳಕಂಡಂತೆ ಇವೆ.

4. **ಯೋಜನೆ ಉದ್ದೇಶ:-** ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಅಲೆಮಾರಿ / ಅರೆಅಲೆಮಾರಿ ಜನಾಂಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಹೊಂದಿಲ್ಲದಿದ್ದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿ ಕೃಷಿ ಅಭಿವೃದ್ಧಿಗೆ ನೆರವು ನೀಡುವುದು.

5. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-**

- ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30/03/2002ರ ಸಂಖ್ಯೆ ಸಕಇ 225 ಬಿಸಿಎ 2000 ಸರ್ಕಾರದ ಆದೇಶದಲ್ಲಿ ಗುರ್ತಿಸಿದ ಪ್ರವರ್ಗ-1ರಲ್ಲಿ 1)ಬೈರಾಗಿ (ಬಾವ), 2)ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕಥಿ-ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ-ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.
- ಅರ್ಜಿದಾರರು ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಕ್ಕೆ ಸೇರಿದವರಾಗಿದ್ದು, ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.
- ಅರ್ಜಿದಾರರು ವ್ಯವಸಾಯ ವೃತ್ತಿಯನ್ನು ನಿರ್ವಹಿಸುತ್ತಿರಬೇಕು.
- ಅರ್ಜಿದಾರರ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ.98,000/-ಗಳನ್ನು ಮೀರಿರಬಾರದು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

...2

- ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.
- ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

3. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-** ಅರ್ಜಿದಾರರು ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು.

    - ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಅಲೆಮಾರಿ / ಅರೆಅಲೆಮಾರಿ ಮತ್ತು ಜನಾಂಗಗಳಿಗೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್‌ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
    - ಅರ್ಜಿದಾರರ ವಾಸದ ಪುರಾವೆಗಾಗಿ ಸಕ್ಷಮ ಪ್ರಾಧಿಕಾರಿಗಳು ನೀಡಿದ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.
    - ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
    - ಅರ್ಜಿದಾರರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರುವ ಬಗ್ಗೆ ಕಂದಾಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
    - ಅರ್ಜಿದಾರರು ಹೊಂದಿರುವ ಜಮೀನಿನ ಕಂದಾಯ ದಾಖಲೆಗಳಾದ ಆರ್.ಟಿ.ಸಿ/ ಪಹಣಿ, ಖಾತಾ ಉದ್ದರಣೆ, ಪಟ್ಟಾಪುಸ್ತಕ, ಮ್ಯುಟೇಶನ್, ಇ.ಸಿ., ವಂಶವೃಕ್ಷ, ಜಮೀನಿನ ಚೆಕ್ ಬಂದಿ.
    - ಅರ್ಜಿದಾರರು ನೀರಾವರಿ ಸೌಲಭ್ಯ ಹೊಂದಿಲ್ಲದೇ ಇರುವುದಕ್ಕೆ ಸ್ವಯಂ ಘೋಷಣೆ.
    - ಘಟಕ ವೆಚ್ಚ ರೂ.1,50,000/-ಕ್ಕಿಂತ ಹೆಚ್ಚಾದಲ್ಲಿ ಸಾಲ ಪಡೆಯುವ ಬಗ್ಗೆ ಫಲಾನುಭವಿಯಿಂದ ಒಪ್ಪಿಗೆ ಪತ್ರ.

4. **ಘಟಕ ವೆಚ್ಚ-ಸಹಾಯಧನ ಮತ್ತು ಸಾಲ:-**

    ಅ. **ವೈಯಕ್ತಿಕ ನೀರಾವರಿ ಕೊಳವೆ ಬಾವಿ** ಯೋಜನೆ ಘಟಕ ವೆಚ್ಚ ರೂ.2.50ಲಕ್ಷಗಳು, ಈ ಮೊತ್ತದಲ್ಲಿ ರೂ.2.00ಲಕ್ಷ ಸಹಾಯಧನ ಹಾಗು ಘಟಕ ಪೂರ್ಣಗೊಳಿಸಲು ಹೆಚ್ಚುವರಿ ಮೊತ್ತ ಅವಶ್ಯವಿದ್ದಲ್ಲಿ ಗರಿಷ್ಠ ರೂ.50,000/-ಗಳ ಸಾಲವನ್ನು ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡುವುದು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಿಗೆ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚ ರೂ.4.00ಲಕ್ಷ ಇದರಲ್ಲಿ ರೂ.3.50ಲಕ್ಷ ಸಹಾಯಧನ, ಉಳಿಕೆ ರೂ.50,000/-ಗಳು ಸಾಲವಾಗಿರುತ್ತದೆ.

    ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಪ್ರತಿ ಕೊಳವೆ ಬಾವಿಗೆ ರೂ.50,000/-ಗಳಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುದೀಕರಣ ವೆಚ್ಚವನ್ನು ಪಾವತಿಸುವುದು.

....3

ಆ. **ತೆರೆದ ಬಾವಿ:** ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಗೆ ನಿಗಧಿಪಡಿಸಿದ ಘಟಕ ವೆಚ್ಚದಲ್ಲಿ ಕರಾವಳಿ ಹಾಗು ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದ ಬಾವಿ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

5. **ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ ಅನುಷ್ಠಾನ:-**

ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಜಿಲ್ಲಾ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| ಕ್ರ.ಸ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 3 | ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಂಟಿ ನಿರ್ದೇಶಕರು/ಜಿಲ್ಲಾ ಮಟ್ಟದ ಅಧಿಕಾರಿ ಕೃಷಿ ಇಲಾಖೆ | ಸದಸ್ಯರು |
| 5 | ಜಂಟಿ ನಿರ್ದೇಶಕರು/ಜಿಲ್ಲಾ ಮಟ್ಟದ ಅಧಿಕಾರಿ ತೋಟಗಾರಿಕೆ ಇಲಾಖೆ | ಸದಸ್ಯರು |
| 6 | ಜನರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 7 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

6. **ಆಯ್ಕೆ ಸಮಿತಿಯ ಕರ್ತವ್ಯಗಳು:-**

- ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.
- ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರನ್ನು ಆಯ್ಕೆ ಸಮಿತಿಯಿಂದ ಆಯ್ಕೆಮಾಡಿದ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗೆ ಕೇಂದ್ರ ಕಛೇರಿಗೆ ಕಳುಹಿಸಬೇಕು.
- ಫಲಾನುಭವಿಗಳನ್ನು ನಿಗದಿತ ಗುರಿಗನುಗುಣವಾಗಿ ಆಯ್ಕೆ ಮಾಡಬೇಕು ಹಾಗು ಆಯ್ಕೆ ಮಾಡುವಾಗ ಅಲೆಮಾರಿ / ಅರೆಅಲೆಮಾರಿ ಜನಾಂಗಗಳಿಗೆ ಸೇರಿ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಪ್ರಾತಿನಿಧ್ಯತೆ ನೀಡಬೇಕು.
- ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ವಿದ್ಯುತ್ ಸಂಪರ್ಕ ದೊರೆಯುವ ಬಗ್ಗೆ ದೃಢೀಕರಿಸಿಕೊಂಡು ಆಯ್ಕೆ ಮಾಡಬೇಕು.

....4

7. <u>ಯೋಜನೆಯ ಅನುಷ್ಠಾನ:-</u>

- ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.
- ಜಿಲ್ಲಾ ವ್ಯವಸ್ಥಾಪಕರು ಅರ್ಹ ಅರ್ಜಿಗಳ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.
- ಆಯ್ಕೆಯಾದ ಫಲಾನುಭವಿಗಳ ಸ್ಥಳ ಪರಿಶೀಲನೆ ಮಾಡಿ ಅರ್ಜಿದಾರರು ನೀರಾವರಿ ಸೌಲಭ್ಯವನ್ನು ಹೊಂದಿಲ್ಲದೇ ಇರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು.
- ಜಿಲ್ಲಾ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಕೇಂದ್ರ ಕಛೇರಿಗೆ ಅನುಮೋದನೆಗೆ ಸಲ್ಲಿಸಬೇಕು. ಕೇಂದ್ರ ಕಚೇರಿಯಿಂದ ಅನುಮೋದನೆ ಪಡೆದಂತಹ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯಿಸಿ, ಪಂಪ್ ಸೆಟ್ ಮತ್ತು ಉಪಕರಣಗಳನ್ನು ಸರಬರಾಜು ಮಾಡಿಸಿ ನೀರಾವರಿ ಸೌಲಭ್ಯ ಒದಗಿಸುವುದು.
- ಕೊಳವೆ ಬಾವಿ ಕೊರೆಯುವಿಕೆಗೆ ಗುತ್ತಿಗೆದಾರರ ನೇಮಕ, ಪಂಪ್‌ಸೆಟ್ ಮತ್ತು ಉಪಕರಣಗಳ ಸರಬರಾಜು ಏಜೆನ್ಸಿಗಳ ನೇಮಕ, ದರಗಳ ನಿಗಧಿಪಡಿಸುವಿಕೆ, ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ, ಇತ್ಯಾದಿಗಳ ಬಗ್ಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಇರುವಂತೆ ನಿರ್ದೇಶಕ ಮಂಡಳಿಯ ಅನುಮೋದನೆಯೊಂದಿಗೆ ಆಗಿಂದಾಗ್ಗೆ ಅಳವಡಿಸಿಕೊಂಡು ಅನುಷ್ಠಾನ ಮಾಡುವುದು.
- ವೈಯಕ್ತಿಕ ಕೊಳವೆ ಬಾವಿ ನೀರಾವರಿ ಯೋಜನೆಯಲ್ಲಿ ನೀರಿಲ್ಲದಿದ್ದರೆ ಹಣವಿಲ್ಲ ಎಂಬ ಷರತ್ತಿನ ಮೇರೆಗೆ ನಿಗಧಿತ ಗುತ್ತಿಗೆದಾರರ ಮೂಲಕ ಕೊಳವೆ ಬಾವಿ ಕೊರೆಯಿಸಬೇಕು. ವಿನಾಚ್ ಮಾದರಿಯಲ್ಲಿ ಕೊಳವೆ ಬಾವಿಯಲ್ಲಿ ದೊರೆತ ನೀರಿನ ಪ್ರಮಾಣವನ್ನು ಅಳತೆ ಮಾಡಬೇಕು.

ಪ್ರತಿ ಗಂಟೆಗೆ 1000 ಗ್ಯಾಲನ್ ನೀರು ಬರುವಂತಹ ಕೊಳವೆ ಬಾವಿಗಳನ್ನು ಯಶಸ್ವಿ ಕೊಳವೆ ಬಾವಿಯೆಂದು ಪರಿಗಣಿಸಿ ಹಣ ಪಾವತಿಗೆ ಗುತ್ತಿಗೆದಾರರು ನೀಡುವ ಬಿಲ್ಲುಗಳನ್ನು ದೃಢೀಕರಿಸುವಾಗ ಬಗ್ಗೆ ಕೊರೆದ ಕೊಳವೆ ಬಾವಿಗಳ ಸ್ಥಳ ಪರಿಶೀಲನೆ ಮಾಡಿ, ದೊರೆತ ನೀರಿನ ಪ್ರಮಾಣ, ಆಳ, ಅಳವಡಿಸಿದ ಕೇಸಿಂಗ್ ಪೈಪ್‌ನ ಗುಣಮಟ್ಟ ಇತ್ಯಾದಿ ಬಗ್ಗೆ ಖಾತ್ರಿ ಪಡಿಸಿಕೊಂಡು ದೃಢೀಕರಿಸಿದ ಬಿಲ್ಲುಗಳನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

- ಕೊರೆದ ಕೊಳವೆ ಬಾವಿಗಳಿಗೆ ಘಟಕ ವೆಚ್ಚದಲ್ಲಿನ ಉಳಿಕೆ ಮೊತ್ತದಲ್ಲಿ ಲಭ್ಯವಾಗುವಂತಹ ಪಂಪ್‌ಸೆಟ್ ಉಪಕರಣಗಳನ್ನು ಸರಬರಾಜು ಮಾಡಲು ನಿಗಧಿತ ಏಜೆನ್ಸಿಗಳಿಗೆ ಆದೇಶ ನೀಡಬೇಕು ಹಾಗು ಸರಬರಾಜು ಮಾಡಿದ ಉಪಕರಣಗಳ ನಿಗಧಿತ ಗುಣಮಟ್ಟ ಮತ್ತು ಪ್ರಮಾಣವನ್ನು ದೃಢೀಕರಿಸಿಕೊಂಡು ಹಣ ಪಾವತಿಗೆ ಬಿಲ್ಲುಗಳನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.
- ಕೊರೆದ ಕೊಳವೆ ಬಾವಿಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದ ಎಸ್ಕಾಂ ಕಛೇರಿಗಳಲ್ಲಿ ನೋಂದಾಯಿಸಿ ಅಗತ್ಯ ಇರುವ ಠೇವಣಿಗಳನ್ನು ಪಾವತಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸಬೇಕು.
- ಘಟಕ ವೆಚ್ಚದಲ್ಲಿ ಸಹಾಯಧನದ ಮೊತ್ತದಲ್ಲಿ ಪೂರ್ಣಗೊಳ್ಳದಿದ್ದಲ್ಲಿ ಸಾಲಕ್ಕೆ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಬೇಕು. ಕೇಂದ್ರ ಕಛೇರಿಯಿಂದ ಮಂಜೂರಾದ ಸಾಲದ ಮೊತ್ತದ ಮರುಪಾವತಿಗೆ ಅಗತ್ಯ ಕಾನೂನು ಭದ್ರತಾ ದಾಖಲತಿಗಳನ್ನು ಪಡೆದು ಜಿಲ್ಲಾ ಕಛೇರಿಯಲ್ಲಿ ಸಂರಕ್ಷಿಸಿಡಬೇಕು.
- ಮಂಜೂರಾದ ಸಾಲದ ವಿವರಗಳನ್ನು ಸಾಲದ ಖಾತಾ ಪುಸ್ತಕದಲ್ಲಿ ನಿರ್ವಹಿಸಬೇಕು ಹಾಗು ನಿಗಧಿಪಡಿಸಿದ ಕಂತುಗಳನ್ವಯ ಮರುಪಾವತಿಗೆ ಕ್ರಮವಹಿಸಬೇಕು.

....5

**<u>ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-</u>** ಸಾಲದ ಭದ್ರತೆಗೆ ಈ ಕೆಳಕಂಡ ನಿಗಧಿತ ದಸ್ತಾವೇಜುಗಳನ್ನು ಫಲಾನುಭವಿಯಿಂದ/ಜಾಮೀನುದಾರರಿಂದ ಪಡೆಯಬೇಕು.

- ಪ್ರಾಮಿಸರಿ ನೋಟ್
- ಡಿ.ಪಿ.ನೋಟ್ ಡೆಲಿವರಿ ಲೆಟರ್
- ಲೆಟರ್ ಆಫ್ ರೀಪೆಮೆಂಟ್
- ಹೈಪಾಥಿಕೇಷನ್ ಡೀಡ್ – ರೂ.50 ಚಾಪಾ ಕಾಗದಲ್ಲಿ
- ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್ – ರೂ.50 ಚಾಪಾ ಕಾಗದಲ್ಲಿ

(ಮೇಲಿನವು) ಫಲಾನುಭವಿಯಿಂದ

- ಲೆಟರ್ ಆಫ್ ಗ್ಯಾರಂಟಿ – ಜಾಮೀನುದಾರರಿಂದ(ರೂ.50ಚಾಪಾ ಕಾಗದದಲ್ಲಿ)
- ಸಾಲದ ಮರುಪಾವತಿ ಅವಧಿ ಪೂರ್ಣಗೊಳ್ಳುವ ಮೊದಲು ಫಲಾನುಭವಿ ಹಾಗೂ ಜಾಮೀನುದಾರರಿಂದ ಋಣದ ಒಪ್ಪಿಗೆ ಪತ್ರ (Acknowledgement of Debt) ಪಡೆಯುವುದು

8. **<u>ಘಟಕ ನಿರ್ವಹಣೆ ಮತ್ತು ತಪಾಸಣೆ:-</u>** ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬಗ್ಗೆ ಘಟಕಗಳ ತಪಾಸಣೆ ಮಾಡಿ ಸಂಬಂಧಿಸಿದ ಎಸ್ಕಾಂಗಳಲ್ಲಿ ಆರ್.ಆರ್. ಸಂಖ್ಯೆಯನ್ನು ಪಡೆಯುವುದು ಹಾಗು ಫಲಾನುಭವಿಗಳು ನೀರಾವರಿ ಸೌಲಭ್ಯ ಉಪಯೋಗಿಸುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

9. **<u>ತರಬೇತಿ:-</u>** ಈ ಕಾರ್ಯಕ್ರಮದಲ್ಲಿ ಆಯ್ಕೆಯಾಗಿ ಕೊಳವೆ ಬಾವಿ ಕೊರೆಯಿಸಿದ ಫಲಾನುಭವಿಗೆ ನೀರಾವರಿ ಇಲಾಖೆ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಮಾಹಿತಿಯನ್ನು ಒದಗಿಸಲು ತರಬೇತಿ ಕಾರ್ಯಗಾರವನ್ನು ಏರ್ಪಡಿಸಿ ತಿಳುವಳಿಕೆ ಮೂಡಿಸುವುದು.

10. **<u>ಯೋಜನೆಯ ಮೌಲ್ಯೀಕರಣ:-</u>** ಯೋಜನೆಯ ಉಪಯುಕ್ತತೆ ಬಗ್ಗೆ ಮತ್ತು ಯೋಜನೆ ಅನುಷ್ಠಾನದಲ್ಲಿನ ಬದಲಾವಣೆಗಳ ಬಗ್ಗೆ ಆಗಿಂದಾಗ್ಗೆ ನಿಗಧಿತ ಏಜೆನ್ಸಿಗಳ ಮೂಲಕ ಮೌಲ್ಯೀಕರಿಸುವುದು.

11. **<u>ನಿಯಮಗಳಿಗೆ ತಿದ್ದುಪಡಿ:-</u>** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

15/9/17

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

# ಅನುಬಂಧ-5

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ:15-09-2020 ರ ಮಾರ್ಗಸೂಚಿಗಳು

### ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಭೂ ಖರೀದಿ (ಭೂ ಒಡೆತನ) ಯೋಜನೆಯ ಮಾರ್ಗಸೂಚಿಗಳು:

*****

**ಪ್ರಸ್ತಾವನೆ:-**

ಸನ್ಮಾನ್ಯ ಮುಖ್ಯಮಂತ್ರಿಯವರ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-169ರಲ್ಲಿ **"ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.25.00ಕೋಟಿ ಅನುದಾನ ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 262 ಬಿಸಿಎ 2018, ದಿನಾಂಕ:28/01/2019 ಮತ್ತು 13/02/2020ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:27/02/2020ರಂದು ನೋಂದಾಯಿಸಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನದಿಂದ ಈ ಕೆಳಗೆ ತಿಳಿಸಿರುವ ಅಲೆಮಾರಿ/ಅರೆಅಲೆಮಾರಿ ಸಮುದಾಯಕ್ಕೆ ಸೇರಿದ ಭೂರಹಿತ ಕೃಷಿ ಕೂಲಿ ಕಾರ್ಮಿಕರಿಗೆ **ಭೂಮಿ ಖರೀದಿಸಲು ಭೂಖರೀದಿ ಯೋಜನೆಯಡಿ** ಸಾಲ ಮತ್ತು ಸಹಾಯಧನವನ್ನು ಒದಗಿಸುವ ಕಾರ್ಯಕ್ರಮದ ನಿಯಮ/ನಿಬಂಧನೆ ಮತ್ತು ಮಾರ್ಗಸೂಚಿಗಳು ಈ ಕೆಳಕಂಡಂತೆ ಇವೆ.

6. **ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು**

1. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ: 01-02-1966ರ ಸಂಖ್ಯೆ ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65 ಸರ್ಕಾರದ ಆದೇಶದಲ್ಲಿ ಗುರ್ತಿಸಿದ 1)ಬೈರಾಗಿ (ಬಾವ), 2)ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕಥಿ-ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ-ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.
3. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ 98,000/- ಮತ್ತು ಪಟ್ಟನ ಪ್ರದೇಶದವರಿಗೆ 1,20,000/-ರೂಗಳ ಮಿತಿಯಲ್ಲಿರಬೇಕು.
4. ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು.
5. ಅರ್ಜಿದಾರ ಅಥವಾ ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಯಾವುದೇ ತೆರನಾದ ಜಮೀನು ಹೊಂದಿರಬಾರದು. ಈ ಬಗ್ಗೆ ಸಂಬಂಧಿಸಿದ ಕಂದಾಯ ಇಲಾಖಾಧಿಕಾರಿಗಳಿಂದ ದೃಡೀಕರಣ ನೀಡಬೇಕು.
6. ಜಾತಿ ಮತ್ತು ಆಧಾಯ ಪ್ರಮಾಣ ಪತ್ರ.
7. ಭೂ ರಹಿತ ಕೃಷಿ ಕೂಲೀ ಕಾರ್ಮಿಕರ ಪ್ರಮಾಣ ಪತ್ರ.(ತಹಶೀಲ್ದಾರ್ ರವರಿಂದ)
8. ವಾಸಸ್ಥಳ ದೃಡೀಕರಣ ಪತ್ರ.(ಆಧಾರ, ಪಡಿತರಚೀಟಿ, ಚುನಾವಣಾ ಗುರುತಿನ ಚೀಟಿ ಇತರೆ)

..2

9. ಸ್ಥಳೀಯ ಹಣಕಾಸು ಸಂಸ್ಥೆಗಳಿಂದ ಬೇಬಾಕಿ ಪತ್ರ.
10. ಆಸ್ತಿ ಮತ್ತು ಋಣಭಾರ ಘೋಷಣಾ ಪತ್ರ.
11. ಅರ್ಜಿದಾರರ ವಂಶವೃಕ್ಷ ಪ್ರತಿ.
12. ಈ ಯೋಜನೆಯಲ್ಲಿ ಸಾಲ ಮಂಜೂರಾದಲ್ಲಿ ಸಬ್ ರಿಜಿಸ್ಟರ್ ಕಛೇರಿಯ ನೊಂದಣಿ ಶುಲ್ಕವನ್ನು ಅರ್ಜಿದಾರರೆ ಭರಿಸಿಕೊಳ್ಳುವ ಬಗ್ಗೆ ನೋಟರಿ ಒಪ್ಪಿಗೆ ಪತ್ರ.

## 7. ಖರೀದಿಗೆ ಲಭ್ಯವಿರುವ ಜಮೀನಿಗೆ ಸಂಭಂಧಿಸಿದಂತೆ ಭೂಮಾಲಿಕರು ಸಲ್ಲಿಸಬೇಕಾದ ದಾಖಲೆಗಳು

1. ಆಸ್ತಿಯ ಕ್ರಯ, ವಿಭಾಗ ಅಥವಾ ಪಿತ್ರಾರ್ಜಿತ ಆಸ್ತಿಯ ಮೂಲ ಪ್ರತಿ.
2. ಇ.ಸಿ. ನಮೂನೆ-15ರಲ್ಲಿ (13ವರ್ಷಗಳದ್ದು)
3. ಪ್ರಸಕ್ತ ಸಾಲಿನ ಪಹಣಿ (ಆರ್.ಟಿ.ಸಿ)
4. ಖಾತಾ ಮತ್ತು ಪಟ್ಟಾ ರಶೀದಿ ಪುಸ್ತಕ
5. ಆಸ್ತಿಯ ನಕ್ಷೆ.
6. ಮ್ಯೂಟೇಷನ್ ರಿಜಿಸ್ಟರ್.
7. ಆಸ್ತಿಯ ವ್ಯಾಲ್ಯೂವೇಷನ್ ಸರ್ಟಿಫಿಕೇಟ್.(ಉಪ ನೊಂದಣಾಧಿಕಾರಿಗಳಿಂದ)
8. ಚಾಲ್ತಿ ವರ್ಷದ ಕಂದಾಯ ಪಾವತಿ ರಶೀದಿ.
9. ಭೂಮಿ ಮಾರಾಟ ಮಾಡುವ ಬಗ್ಗೆ ಮಾಲಿಕರ ನೋಟರಿ ಒಪ್ಪಿಗೆ ಪ್ರಮಾಣ ಪತ್ರ.
10. ಭೂ ಮಾಲೀಕರ ವಂಶವೃಕ್ಷ
11. ಭೂ ಮಾಲೀಕರ ವಂಶವೃಕ್ಷದನ್ವಯ ಕಾನೂನು ಭದ್ದವಾರಸೂದಾರರ ನೋಟರಿ ಒಪ್ಪಿಗೆ ಪ್ರಮಾಣ ಪತ್ರ.
12. ಭೂ ಮಾಲೀಕರು ಜಿಲ್ಲಾ ಸಮಿತಿ ನಿರ್ಧರಿಸುವ ಬೆಲೆಗೆ ಭೂಮಿ ಮಾರಾಟಮಾಡಲು ಒಪ್ಪಿರುವ ಬಗ್ಗೆ ನೋಟರಿ ಪ್ರಮಾಣ ಪತ್ರ.
13. ಮಾರಾಟಕ್ಕೆ ಲಭ್ಯವಿರುವ ಜಮೀನು ಯಾವುದೇ ರೀತಿಯ ತಂಟೆ ತಕರಾರು ಗ್ರಾಂಟ್ ಮತ್ತು ಸರ್ಕಾರ ನೀಡುವ ಉಚಿತ ಭೂಮಿಯಲ್ಲವೆನ್ನುವ ಬಗ್ಗೆ ಸಂಬಂಧಿಸಿದ ತಹಶಿಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ವರಧಿ ಸಲ್ಲಿಸುವುದು.(ಕಲಂ 79ಎ & 79ಬಿ)
14. ಖರೀದಿಗೆ ಲಭ್ಯವಿರುವ ಜಮೀನು ಈಗಾಗಲೇ ರಾಷ್ಟ್ರೀಕೃತ, ಖಾಸಗಿ ಮತ್ತು ಸಹಕಾರಿ ಬ್ಯಾಂಕ್ ಅಥವಾ ಖಾಸಗಿ ವ್ಯಾಕ್ತಿಗಳಿಗೆ ಅಡಮಾನ/ಆಧಾರವಾಗಿದ್ದಲ್ಲಿ ಅಂತಹ ಜಮೀನನ್ನು ಖರೀದಿಗೆ ಶಿಫಾರಸ್ಸು ಮಾಡಬಾರದು.
15. ಕೃಷಿಗೆ ಯೋಗ್ಯವಿರುವ ಬಗ್ಗೆ ಕೃಷಿ ಅಧಿಕಾರಿಗಳ ದೃಡೀಕರಣ ಪತ್ರ.
16. ಭೂಮಾಲೀಕರಿಂದ ಕರಾರು ಪತ್ರ ಕರಾರು ಪತ್ರದಲ್ಲಿ ಸಮಿತಿ ನಿಗದಿಪಡಿಸುವ ದರಕ್ಕೆ ಜಮೀನು ಮಾರಾಟ ಮಾಡುವ ಬಗ್ಗೆ ಒಪ್ಪಿಗೆ, ಸಮ್ಮತಿ ಹಾಗೂ ಅಂದಾಜು ಅವಧಿ ನಮೂದಿಸಿ ಮುಚ್ಚಳಿಕೆ ಪಡೆಯಬೇಕು. ಅವಧಿ ನಿಗದಿಪಡಿಸಿದ ಸಮಯದಲ್ಲಿ ಭೂಖರೀದಿ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಕರಾರು ಮುಚ್ಚಳಿಕೆಯನ್ನು ನವೀಕರಿಸಿಕೊಳ್ಳಬೇಕು. ಒಂದುವೇಳೆ ಕರಾರಿನಂತೆ ಜಮೀನು ಮಾರಾಟ ಮಾಡಲು ಇಚ್ಚಿಸದಿದ್ದಲ್ಲಿ ದಾಖಲೆಗಳನ್ನು ವಾಪಸ್ಸು ಪಡೆದುಕೊಂಡರೆ ಈ ಸಂಬಂಧ ಫಲಾಪೇಕ್ಷಿಗಳಿಗೆ ಮುಂಬರಹ ನೀಡಬೇಕು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ನಿಯಮಾನುಸಾರ ಹಿಂದಿರುಗಿಸಬೇಕು.

8. **ಘಟಕ ವೆಚ್ಚ:-**

ಅ. ಅಲೆಮಾರಿ/ ಅರೆಅಲೆಮಾರಿ ಜನಾಂಗದ ಗ್ರಾಮೀಣ ಪ್ರದೇಶದ ಭೂ ರಹಿತ ಕೃಷಿ ಕೂಲಿಕಾರ್ಮಿಕರಿಗೆ ಘಟಕವೆಚ್ಚ 15.00 ಲಕ್ಷರೂಗಳ ಮಿತಿಯೊಳಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನುಗಳನ್ನು ಅರ್ಧ ಎಕರೆಗೆ (20ಗುಂಟೆಗೆ)ಕಡಿಮೆಯಾಗದಂತೆ ಖರೀದಿಸಲು ಅವಕಾಶವಿರುತ್ತದೆ. ಇದರಲ್ಲಿ ಶೇಕಡ 50ರಷ್ಟು ಸಹಾಯಧನ ಮತ್ತು ಶೇಕಡ 50ರಷ್ಟು ಸಾಲವನ್ನೊಳಗೊಂಡಿರುತ್ತದೆ. ಅರ್ಜಿದಾರರು ಸರ್ಕಾರದ ಆದೇಶ ಸಂಖ್ಯೆ: ಬಿ.ಸಿ.ಡಬ್ಲ್ಯೂ 1287 ಬಿ.ಎಂ.ಎಸ್.2015 ದಿನಾಂಕ:21-12-2015ರ ಆದೇಶದನ್ವಯ ರಾಜ್ಯದಲ್ಲಿ ಎಲ್ಲಿ ಖರೀದಿಗೆ ಜಮೀನು ಲಭ್ಯವಿದೆಯೋ ಅಲ್ಲಿ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.

ಆ. ಜಿಲ್ಲಾ ಸಮಿತಿ ನಿಗದಿಪಡಿಸಿದ ನೊಂದಾಯಿತ ಬೆಲೆಯ 03 ಪಟ್ಟು ಮೀರಿದ ಪ್ರಕರಣಗಳನ್ನು ಸೂಕ್ತ ದಾಖಲೆಗಳೊಂದಿಗೆ ಪ್ರತ್ಯೇಕವಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು ಕೇಂದ್ರ ಕಛೇರಿಯಿಂದ ಇಂತಹ ಪ್ರಕರಣಗಳನ್ನು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸುವುದು.

9. **ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳ ಅನುಷ್ಠಾನ:-**

**ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಿದ ಅರ್ಜಿದಾರರನ್ನು ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು ದರ ನಿರ್ಧರಣೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಆಯ್ಕೆ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯುವುದು.**

**ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿ**

| | | |
|---|---|---|
| 1 | ವಿಧಾನಸಭಾ ಕ್ಷೇತ್ರದ ಶಾಸಕರು | ಅಧ್ಯಕ್ಷರು |
| 2 | ಆಯಾ ಲೋಕಸಭಾ ಕ್ಷೇತ್ರದ ಸದಸ್ಯರು | ಸದಸ್ಯರು |
| 3 | ಆಯಾ ರಾಜ್ಯಸಭಾ ಕ್ಷೇತ್ರದಲ್ಲಿ ಖಾಯಂ ಆಗಿ ವಾಸಿಸುವಂತಹ ರಾಜ್ಯಸಭಾ ಸದಸ್ಯರು | ಸದಸ್ಯರು |
| 4 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 5 | ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ | ಸದಸ್ಯರು |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ | ಸದಸ್ಯರು |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್ಚ್ಛಕ್ತಿ ಮಂಡಳಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) | ಸದಸ್ಯರು |
| 9 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ | ಸದಸ್ಯರು |
| 10 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರು | ಸದಸ್ಯರು |
| 11 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 12 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 13 | ಸಂಬಂಧಿಸಿದ ಜಿಲ್ಲೆಯ ಅರಣ್ಯಾಧಿಕರಿ | ಸದಸ್ಯರು |
| 14 | ಹಿಂದುಳಿದ ವರ್ಗಗಳ ಇಲಾಖೆಯ ನಿರೀಕ್ಷಕರು | ಸದಸ್ಯರು |
| 15 | ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಭಿವೃದ್ಧಿ ಅಧಿಕಾರಿ/ | ಸದಸ್ಯ ಕಾರ್ಯದರ್ಶಿ |

## ಜಿಲ್ಲಾ ಧರನಿರ್ಧರಣ ಸಮಿತಿ

| ಕ್ರ. ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಉಪವಿಭಾಗಾಧಿಕಾರಿಗಳು | ಸದಸ್ಯರು |
| 3 | ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರರು | ಸದಸ್ಯರು |
| 4 | ಸಂಬಂಧಿಸಿದ ಉಪ ನೊಂದಣಾಧಿಕಾರಿಗಳು | ಸದಸ್ಯರು |
| 5 | ತಾಲ್ಲೂಕಿನ ಕಾರ್ಯಪಾಲಕ ಅಭಿಯಂತರರು ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 6 | ಜಿಲ್ಲಾ ವ್ಯವಸ್ಥಾಪಕರು ಡಿ.ಬಿ.ಸಿ.ಡಿ.ಸಿ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ ಕಛೇರಿಗೆ ಸಲ್ಲಿಸಿರುವ ಅರ್ಜಿ ಮತ್ತು ದಾಖಲೆಗಳನ್ನು ಜಿಲ್ಲಾ ವ್ಯವಸ್ಥಾಪಕರು ಕೂಲಂಕುಶವಾಗಿ ಪರಿಶೀಲಿಸಿ ಅರ್ಜಿದಾರರು ಗ್ರಾಮ ಸಭೆಗಳಲ್ಲಿ ಆಯ್ಕೆಯಾಗಿರುವ ಬಗ್ಗೆ ಗ್ರಾಮ ಸಭೆಯ ಠರಾವು/ನಡವಳಿ ಸಹಿತ ಮಾನ್ಯ ಶಾಸಕರ ಆಯ್ಕೆ ಸಮಿತಿಗೆ ಮಂಡಿಸಿ ಅನುಮೋದನೆ ಪಡೆದು ನಡವಳಿಯೊಂದಿಗೆ ಹಾಗೂ ಪೂರ್ಣವಿವರಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಿದ್ಧಪಡಿಸುವುದು. ಈ ಪ್ರಸ್ತಾವನೆಯಲ್ಲಿ ಅರ್ಜಿದಾರರ ಹೆಸರು ಮತ್ತು ವಿಳಾಸ ಭೂಮಾಲೀಕರ ಹೆಸರು ಮತ್ತು ವಿಳಾಸ, ಜಮೀನಿನ ವಿಸ್ತೀರ್ಣ, ಜಮೀನು ಇರುವ ಸ್ಥಳ ಚಾಲ್ತಿವರ್ಷದ ನೊಂದಾಯಿತ ಬೆಲೆಯನ್ನು ನಮೂದಿಸಿ ಜಿಲ್ಲಾ ಆಯ್ಕೆ ಸಮಿತಿಗೆ ಪ್ರಸ್ತಾವನೆಯನ್ನು ಮಂಡಿಸುವುದು. ಸಮಿತಿಯಲ್ಲಿ ಪ್ರತಿ ಜಮೀನಿನ ಬಗ್ಗೆಯು ನಿಗದಿಪಡಿಸಿದ ಬೆಲೆ ಹಾಗೂ ಬೆಲೆ ನಿಗದಿಪಡಿಸಲು ಅನುಸರಿಸಿದ ಮಾನ ದಂಡಗಳನ್ನು ನಡವಳಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು. ಜಿಲ್ಲಾ ಸಮಿತಿ ದರ ನಿರ್ದರಿಸುವ ಸಮಯದಲ್ಲಿ ಅರ್ಜಿದಾರರು ಮತ್ತು ಭೂ ಮಾಲಿಕರು ಹಾಜರಿದ್ದು ಜಿಲ್ಲಾ ಸಮಿತಿ ನಿರ್ಧರಿಸುವ ಬೆಲೆಗೆ ಭೂಮಿ ಮಾರಾಟಮಾಡಲು ಮಾಲೀಕರು ಮತ್ತು ಭೂಮಿ ಕೊಳ್ಳಲು ಅರ್ಜಿದಾರರು ಒಪ್ಪಬೇಕು. ಈ ಬಗ್ಗೆ ಒಪ್ಪಿಗೆ ಪತ್ರಗಳನ್ನು ಪಡೆದುಕೊಳ್ಳಬೇಕು.

ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಿದ ಜಿಲ್ಲಾ ಸಮಿತಿ ಅನುಮೋದಿಸಿ ಶಿಫಾರಸ್ಸು ಮಾಡಿದ ಪ್ರಸ್ತಾವನೆಗಳನ್ನು ಆಯ್ಕೆ ಸಮಿತಿಗಳ ಪೂರ್ಣ ನಡವಳಿ ಹಾಗೂ ಅರ್ಜಿದಾರರು ಮತ್ತು ಭೂಮಾಲಿಕರುಗಳಿಂದ ಮೇಲೆ ವಿವರಿಸಿರುವ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಸಾಲ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಈ ಪ್ರಸ್ತಾವನೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ಖುದ್ದಾಗಿ ಜಮೀನಿನ ಸ್ಥಳ ಪರಿಶೀಲಿಸಿ ಕೃಷಿಗೆ ಯೋಗ್ಯವಾಗಿರುವ ಬಗ್ಗೆ ಮತ್ತು ಜಮೀನು ಭೂಮಾಲೀಕರ ಸ್ವಾದೀನದಲ್ಲಿರುವ ಬಗ್ಗೆ ದೃಢೀಕರಿಸುವುದು. ನೀರಾವರಿ ಜಮೀನಾಗಿದ್ದಲ್ಲಿ ನೀರಾವರಿ ಮೂಲದ ಬಗ್ಗೆ ಮತ್ತು ನೀರಾವರಿ ಬೆಳೆಗಳನ್ನು ಬೆಳೆಯುತ್ತಿರುವ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುವುದು ಸಾಗುವಳಿ ವಿವರಗಳುಳ್ಳ ಮೂಲ ಪಹಣಿಯನ್ನು ಪಡೆಯುವುದು.

ಜಿಲ್ಲಾ ಸಮಿತಿಯಲ್ಲಿ ಪ್ರಸ್ತಾವನೆಗಳನ್ನು ಮಂಡಿಸುವಾಗ ಭೂಮಾಲೀಕರ ಸಂಪೂರ್ಣ ವಿಳಾಸ, ಜಾತಿ, ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ, ಜಮೀನು ಇರುವ ಜಾಗ, ಖರೀದಿಸಬೇಕಾದ ಜಮೀನಿನ ವಿಸ್ತೀರ್ಣ, ವಿಧಾನ ಸಭಾ ಕ್ಷೇತ್ರ, ಫಲಾನುಭವಿಗಳ ಹೆಸರು ಮತ್ತು ವಿಳಾಸ, ಜಾತಿ, ಉಪಜಾತಿ, ಸಬ್ ರಿಜಿಸ್ಟರ್‌ರವರ ನೋಂದಾಯಿತ ಬೆಲೆ ವಿವರ ಜಿಲ್ಲಾ ಸಮಿತಿ ನಿಗದಿಪಡಿಸಿರುವ ದರ ನಮೂದಿಸಿ ಅನುಮೋದನೆಗೆ ಸಲ್ಲಿಸಬೇಕು.

ಈ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಯಲ್ಲಿ ಪರೀಶಿಲಿಸಿ ನಿಗಮದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಖರೀದಿಗೆ ಲಭ್ಯವಿರುವ ಜಮೀನು ನಿಗಮದಿಂದ ಖರೀದಿಸಲು ಅರ್ಹವಿದ್ದಲ್ಲಿ ಕಾನೂನು ಸಲಹೆಗಾರರ ವರಧಿಯನ್ನಾಧರಿಸಿ ಸಹಾಯಧನ ಮತ್ತು ಸಾಲ ಮಂಜೂರುಮಾಡಿ ಸಾಲದ ಮೊತ್ತವನ್ನು ಚೆಕ್ಕಿನ ಮೂಲಕ ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕರಿಗೆ ಬಿಡುಗಡೆ ಮಾಡಲಾಗುವುದು. ಸಾಲ ಬಿಡುಗಡೆಯಾದ ನಂತರ ಜಿಲ್ಲಾ ವ್ಯವಸ್ಥಾಪಕರು ಈ ಕೆಳಕಂಡಂತೆ ಕ್ರಮ ವಹಿಸುವುದು.

...5

1. ಜಿಲ್ಲಾ ಸಮಿತಿಯ ತೀರ್ಮಾನದಂತೆ ಮಂಜೂರು ಮಾಡಿ ಬಿಡುಗಡೆ ಮಾಡಲಾದ ಒಟ್ಟು ಸಾಲದ ಮೊತ್ತವನ್ನು ಜಿಲ್ಲಾ ಸಮಿತಿಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳ ಅವಗಾಹನೆಗೆ ತಂದು ಅವರ ಅನುಮತಿ ಪಡೆದು ಅವರ ಸಮ್ಮುಖದಲ್ಲಿ ಫಲಾನುಭವಿಗಳು ಹಾಗೂ ಜಮೀನಿನ ಮಾಲೀಕರಿಗೆ ಚೆಕ್ಕು/ ಆರ್.ಟಿ.ಜಿ.ಎಸ್ ಪತ್ರ ವಿತರಿಸುವುದು. ಈ ಬಗ್ಗೆ ಭಾವ ಚಿತ್ರ(ಫೋಟೋ)ವನ್ನು ಪಡೆದು ಕೇಂದ್ರ ಕಛೇರಿಗೆ ಕಳುಹಿಸುವುದು.
2. ಸರ್ಕಾರದ ಆದೇಶದನ್ವಯ ಅರ್ಜಿದಾರರ ಹೆಸರಿನಲ್ಲಿ ಜಮೀನನ್ನು ಪತಿ ಪತ್ನಿ ಇಬ್ಬರ ಹೆಸರಿನಲ್ಲಿಯ ಜಂಟಿಯಾಗಿ ನೊಂದಣಿ ಮಾಡಿಸತಕ್ಕದ್ದು.
3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಭೂ ಮಾಲೀಕರ ಜಮೀನನ್ನು ಖರೀದಿಸಬಾರದು.
4. ಅಲೆಮಾರಿ ಮತ್ತು ಅರೆ ಅಲೆಮಾರಿ ಅಥವಾ ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ್ದು, 5 ಎಕರೆಗಿಂತ ಹೆಚ್ಚುವರಿ ಜಮೀನು ಹೊಂದಿದ್ದು, ಹೆಚ್ಚುವರಿ ಜಮೀನನ್ನು ಸ್ವಇಚ್ಛೆಯಿಂದ ಮಾರಾಟ ಮಾಡಲು ಭೂಮಾಲೀಕರು ಇಚ್ಚಿಸಿದಲ್ಲಿ ಅಂತಹ ಜಮೀನನ್ನು ಖರೀದಿಸಬಹುದು.
5. ಖರೀದಿ ಮಾಡಲಾಗುವ ಜಮೀನಿನ ನೋಂದಣಿ ಮಾಡಿಕೊಳ್ಳುವಾಗ ಜಮೀನನ್ನು ನಿಗಮದ ಹೆಸರಿಗೆ ಆಧಾರವಾಗಿರುವುದನ್ನು ದಾಖಲಿಸಬೇಕು. ಈ ಸಂಬಂಧ ಅನುಬಂಧ-**XI** ರಲ್ಲಿ ಸರಳ ನೋಂದಾಯಿತ ಅಡಮಾನ ಪತ್ರ ಮಾಡಿಸುವುದು.
6. ನೋಂದಣಿ ಶುಲ್ಕವನ್ನು ಫಲಾನುಭವಿಗಳೇ ಸ್ವತ: ಭರಿಸಿಕೊಳ್ಳಬೇಕು.
7. ಭೂಮಿಯನ್ನು ಮಾರಾಟ ಮಾಡುವ ಮಾಲೀಕರಿಗೆ, ಅವರು ಹೊಂದಿರುವ ಬ್ಯಾಂಕ್‌ನ ಉಳಿತಾಯ ಖಾತೆಗೆ ಹಣ ಜಮಾ ಆಗುವಂತೆ ಚೆಕ್ಕನ್ನು ವಿತರಿಸಬೇಕು. ಇದರಲ್ಲಿ ಏನಾದರೂ ವ್ಯತ್ಯಾಸವಾದಲ್ಲಿ ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ವ್ಯವಸ್ಥಾಪಕರನ್ನು ಸಂಪೂರ್ಣವಾಗಿ ಜವಾಬ್ದಾರರನ್ನಾಗಿಸಲಾಗುವುದು ಮತ್ತು ಇದಕ್ಕೆ ಹಣದುರುಪಯೋಗವೆಂದು ಪರಿಗಣಿಸಿ ಕ್ರಮ ಜರುಗಿಸಲಾಗುವುದು.
8. ಖರೀದಿಸಲಾಗುವ ಜಮೀನನ್ನು ಫಲಾನುಭವಿಗಳ ಸಮ್ಮುಖದಲ್ಲಿ ಸರ್ವೇಯರ್‌ರವರಿಂದ ಅಳತೆ ಮಾಡಿಸಿ, ಗಡಿ ಗುರುತು ಹಾಕಿಸಿ ಮಹಜರ್ ಮಾಡಿಸಿ, ಫಲಾನುಭವಿಗಳ ಸ್ವಾಧೀನಕ್ಕೆ ನೀಡಬೇಕು. ಜಮೀನನ್ನು ನೋಂದಣಿ ಮಾಡಿಕೊಳ್ಳುವ ಮೊದಲು ಜಿಲ್ಲಾ ವ್ಯವಸ್ಥಾಪಕರು ಸ್ವತ: ಗಡಿ ಗುರುತು ಮಾಡಿ ಪರಿಶೀಲಿಸಿ ಕೃಷಿಗೆ ಯೋಗ್ಯವಾಗಿದ್ದಲ್ಲಿ ಮಾತ್ರ ನೋಂದಣಿ ಮಾಡಿಸಬೇಕು. ಕೃಷಿಗೆ ಅರ್ಹವಲ್ಲದ ಜಮೀನನ್ನು ಖರೀದಿಸಿ ನೋಂದಾಯಿಸಿದಲ್ಲಿ ಯೋಜನೆಯ ವಿಫಲತೆಗೆ ಜಿಲ್ಲಾ ವ್ಯವಸ್ಥಾಪಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
9. ಜಮೀನಿನ ಮೇಲೆ ಯಾವುದೇ ಋಣ ಭಾರವಾಗಲಿ, ಪರಭಾರೆಯಾಗಲಿ, ಸರ್ಕಾರದ ಗ್ರ್ಯಾಂಟ್ ಆಗಿರುವ ಜಮೀನಾಗಲಿ ಅರಣ್ಯ ಕಾಯ್ದೆ ಉಲ್ಲಂಘನೆ, ಭೂ ಸುಧಾರಣಾ ಕಾಯ್ದೆ ಉಲ್ಲಂಘನೆ ಆಗಿಲ್ಲದಿರುವ ಬಗ್ಗೆ ಅಥವಾ ತಕರಾರು ಇರುವ ಜಮೀನು ಆಗಿಲ್ಲದಿರುವುದನ್ನು ಮತ್ತೊಮ್ಮೆ ಖಾತ್ರಿ ಪಡಿಸಿಕೊಂಡು ಫಲಾನುಭವಿಯ ಹೆಸರಿಗೆ ನೋಂದಣಿ ಮಾಡಿಸುವುದು. ಖರೀದಿಯ ಹಾಗೂ ಯಾವುದೇ ದಿನಾಂಕಕ್ಕೆ ಅನ್ವಯಿಸಿದಂತೆ ಇ.ಸಿ. ಪಡೆದು, ಎಲ್ಲಾ ವಾರಸುದಾರರ ಸಮ್ಮುಖದಲ್ಲಿ ನೋಂದಣಿ ಮಾಡಿಸುವುದು.
10. ಫಲಾನುಭವಿ ಹೆಸರಿಗೆ ನೋಂದಣಿ ಮಾಡಿದ ದಿನವೇ ನಿಗಮದ ಹೆಸರಿಗೆ ಅಡಮಾನ (Mortgage) ಮಾಡಿಕೊಳ್ಳುವುದು.
11. ಜಮೀನು ನೋಂದಣಿ ಮಾಡಿಸಿದ 45 ದಿವಸಗಳೊಳಗಾಗಿ ಫಲಾನುಭವಿಗಳ ಹೆಸರಿಗೆ ಖಾತೆ ವರ್ಗಾಯಿಸಿಕೊಡತಕ್ಕದ್ದು. ಖಾತೆ ವರ್ಗಾವಣೆಯಾದ ನಂತರ ಪಹಣಿ ಮತ್ತು ನಿಗಮಕ್ಕೆ ಆಧಾರವಾದ ಬಗ್ಗೆ ನಮೂದಿಸಲ್ಪಟ್ಟ 2ನೇ ಇ.ಸಿ. ಪಡೆದು ನಿಗಮದ ಹೆಸರು ದಾಖಲಾಗಿರುವ ಬಗ್ಗೆ ದೃಢೀಕರಿಸಿಕೊಂಡು ಜಿಲ್ಲಾ ಕಚೇರಿಯಲ್ಲಿ ಸುಸ್ಥಿತಿಯಲ್ಲಿ ಇಡತಕ್ಕದ್ದು ಹಾಗೂ ಕೇಂದ್ರ ಕಛೇರಿಗೂ ಒಂದು ಪ್ರತಿಯನ್ನು ಕಳುಹಿಸಿ ವರದಿ ಮಾಡುವುದು.
12. ಈ ಬಿಡುಗಡೆ ಮಾಡಿದ ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಭೂಮಿ ಖರೀದಿಸುವ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಕೇಂದ್ರ ಕಚೇರಿಗೆ ಕಳುಹಿಸುವುದು.
13. ಈ ಯೋಜನೆಯು ಅಲೆಮಾರಿ/ಅರೆ ಅಲೆಮಾರಿ ಭೂರಹಿತ ಕೃಷಿ ಕಾರ್ಮಿಕರಿಗೆ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅನ್ವಯಿಸುವುದು. ಕೃಷಿ ಜಮೀನು ಮಾತ್ರ ಖರೀದಿಸತಕ್ಕದ್ದು, ಇದರ ಫಲಾನುಭವಿಗಳು ಯಾವುದೇ ಕಾರಣಕ್ಕೆ ಈ ಜಮೀನನ್ನು ಪರಭಾರೆ ಅಥವಾ ಮಾರಾಟ ಮಾಡತಕ್ಕದಲ್ಲ.

..6

14. ಜಿಲ್ಲಾ ಆಯ್ಕೆ ಸಮಿತಿಯ ತೀರ್ಮಾನದನ್ವಯ ಫಲಾನುಭವಿಗಳ ಹೆಸರಿಗೆ ಜಮೀನು ಖಾತೆಯಾಗುವ ಸಮಯದಲ್ಲಿ ಆರ್.ಟಿ.ಸಿ ಕಾಲಂ ನಂ.11ರಲ್ಲಿ ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಟ್ಟಿರುತ್ತದೆ ಎಂದು ಸಂಬಂಧಪಟ್ಟ ತಹಶೀಲ್ದಾರ್‌ವರಿಂದ ನಮೂದಿಸಲು ಅಗತ್ಯ ಕ್ರಮಕೈಗೊಳ್ಳುವುದು.
15. ಈ ಯೋಜನೆಯಲ್ಲಿ ಮಂಜೂರು ಮಾಡಿದ ಅಲೆಮಾರಿ/ಅರೆಅಲೆಮಾರಿ ಜಮೀನನ್ನು ಬೇರೆ ಯಾರಾದರೂ ಖರೀದಿಸಿದಲ್ಲಿ ಅದು ಊರ್ಜಿತವಾಗುವುದಿಲ್ಲ.
16. ಭೂ ಖರೀದಿ ಯೋಜನೆಯಲ್ಲಿ ಭೂಮಿ ಖರೀದಿಸಿದ ಫಲಾನುಭವಿಗಳಿಗೆ ಕೌನ್ಸಿಲಿಂಗ್ ಏರ್ಪಡಿಸಿ, ಭೂಮಿಯಲ್ಲಿ ಆರ್ಥಿಕ ಬೆಳೆಗಳನ್ನು ಬೆಳೆಯುವ ಬಗ್ಗೆ ಮತ್ತು ಇತರೆ ಇಲಾಖೆಗಳಿಂದ ಜಮೀನಿನ ಅಭಿವೃದ್ಧಿಗೆ ಮತ್ತು ಉತ್ತಮ ಬೆಳೆ ಬೆಳೆಯಲು ಸರ್ಕಾರದಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು.
17. ಫಲಾನುಭವಿಯು ಈ ಭೂಮಿಯನ್ನು ಸದುಪಯೋಗಪಡಿಸಿಕೊಂಡು ಉತ್ತಮ ಬೆಳೆ ಬೆಳೆದು ಜೀವನಮಟ್ಟವನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಬಗ್ಗೆ ಹಾಗೂ ಖರೀದಿಸುವ ಜಮೀನನ್ನು ಸದುಪಯೋಗಪಡಿಸಿಕೊಳ್ಳದೆ ಇದ್ದಲ್ಲಿ ನಿಗಮಕ್ಕೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಅವರಿಂದ ಮುಚ್ಚಳಿಕೆ ಪಡೆಯಬೇಕು.
18. ದಿನಾಂಕ 07/03/2003ರ ನಿಗಮದ ಸುತ್ತೋಲೆ ಸಂಖ್ಯೆ: ಕಹಿನಿ/ವ್ಯ/ಸಿಆರ್-03/2002-03 (ಪರಿಷ್ಕೃತ ದಸ್ತಾವೇಜು) ಸಾಲದ ಮೊತ್ತಕ್ಕನುಗುಣವಾಗಿ ಕೆಳಕಾಣಿಸಿದ ಅಗತ್ಯ ಭದ್ರತಾ ದಾಖಲಾತಿಗಳನ್ನು ಪಡೆದು, ಭೂಮಿ ಮಾರಾಟಗಾರರಿಗೆ ಹಣ ಪಾವತಿಸುವ ಮುನ್ನ ಎಲ್ಲಾ ದಾಖಲಾತಿ ಪಡೆಯುವ ಪ್ರಕ್ರಿಯೆ ಪೂರ್ಣಗೊಂಡಿರುವ ಬಗ್ಗೆ ದೃಢೀಕರಿಸಿಕೊಂಡು ಫಲಾನುಭವಿಯ ಹೆಸರಿಗೆ ಜಮೀನು ನೋಂದಣಿ ಮಾಡಿಸಲು ಕ್ರಮವಹಿಸುವುದು.

| | | |
|---|---|---|
| 1. | ಪ್ರಾಮಿಸರಿ ನೋಟು | ಅನುಬಂಧ I |
| 2 | ಡಿ.ಪಿ.ನೋಟ್ ಬಟವಾಡೆ ಪತ್ರ | ಅನುಬಂಧ II |
| 3 | ಮರುಸಂದಾಯ ಪತ್ರ | ಅನುಬಂಧ III |
| 4 | ಪ್ರತಿಫಲದ ಸ್ವೀಕೃತಿ ಪತ್ರ. | ಅನುಬಂಧ IV |
| 5 | ಒಪ್ಪಂದದ ನಿಬಂಧನೆಗಳು (ರೂ. 200/-ಛಾಪಾ ಕಾಗದದಲ್ಲಿ) | ಅನುಬಂಧ V |
| 6 | ಖಾತರಿ ಪತ್ರ (ರೂ.200/-ಛಾಪಾ ಕಾಗದದಲ್ಲಿ) | ಅನುಬಂಧ VI |
| 7 | ಸರಳ ನೊಂದಾಯಿತ ಅಡಮಾನ ಪತ್ರ | ಅನುಬಂಧ XI |
| 8 | ಸಹಾಯಧನ ವಿತರಣೆ ಮಾಡಿದ ಬಗ್ಗೆ ದೃಢೀಕರಣ | ಅನುಬಂಧ XX |
| 9 | ಸಹಾಯಧನ/ಉಪಯೋಗಿಸಿದ ಬಗ್ಗೆ ಸಾಲಗಾರನಿಂದ ಘೋಷಣೆ | ಅನುಬಂಧ XXI |

19. ನಿಗಮದಿಂದ ಮಂಜೂರು ಮಾಡಲಾಗುವ ಸಾಲದ ಮೊತ್ತವನ್ನು 5 ವರ್ಷದ ಅವಧಿಯಲ್ಲಿ ಶೇಕಡ 6ರ ಬಡ್ಡಿದರದಲ್ಲಿ ಅರ್ಧವಾರ್ಷಿಕ ಕಂತುಗಳಾಗಿ ಅಸಲು ಮತ್ತು ಬಡ್ಡಿ ಸೇರಿಸಿ ಮರುಪಾವತಿ ಮಾಡಬೇಕು. ಜಮೀನು ನೋಂದಾಯಿಸಿದ ದಿನಾಂಕದಿಂದ 06 ತಿಂಗಳ ನಂತರ ಮೊದಲನೇ ಕಂತು ಪ್ರಾರಂಭವಾಗುತ್ತದೆ.
20. <u>ಸಾಲದ ಖಾತಾ ಪುಸ್ತಕವನ್ನು ಮಂಜೂರಾತಿ ಆದೇಶದಲ್ಲಿ ತಿಳಿಸಿದಂತೆ ನಿಗದಿಪಡಿಸಿದ ನಮೂನೆಯಲ್ಲಿ ನಿರ್ವಹಿಸಬೇಕು.</u>
21. **<u>ಡಿ.ಸಿ.ಬಿ ತಯಾರಿಸಿ ಸಾಲ ವಸೂಲಾತಿಗೆ ಕ್ರಮ:-</u>**

(c) ನಿಗಮದಿಂದ ಮಂಜೂರು ಮಾಡಲಾಗುವ ಸಾಲದ ಮೊತ್ತವನ್ನು 5 ವರ್ಷದ ಅವಧಿಯಲ್ಲಿ ಶೇಕಡ 6ರ ಬಡ್ಡಿದರದಲ್ಲಿ ಅರ್ಧವಾರ್ಷಿಕ ಕಂತುಗಳಾಗಿ ಅಸಲು ಮತ್ತು ಬಡ್ಡಿ ಸೇರಿಸಿ ಮರುಪಾವತಿ ಮಾಡಬೇಕು. ಜಮೀನು ನೋಂದಾಯಿಸಿದ ದಿನಾಂಕದಿಂದ 06 ತಿಂಗಳ ನಂತರ ಮೊದಲನೇ ಕಂತು ಪ್ರಾರಂಭವಾಗುತ್ತದೆ.

...7

(d) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ ನಿಯಮಾನಯುಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು.

22. **<u>ಉದ್ಯಮಶೀಲತಾ ತರಬೇತಿ:-</u>** ಆಯ್ಕೆ ಮಾಡಿ ಸೌಲಭ್ಯ ಮಂಜೂರು ಮಾಡಿದ ಫಲಾನುಭವಿಗಳಿಗೆ ಭೂಖರೀದಿ ಘಟಕಗಳ ನಿರ್ವಹಣೆ, ಉಪಯೋಗ, ಸಾಲ ಮರುಪಾವತಿ, ವಿಮೆ ಕುರಿತು ಅರಿವು ಮೂಡಿಸಲು ಭೂಮಿಯಲ್ಲಿ ಆರ್ಥಿಕ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಸಂಬಂಧ ಮತ್ತು ಸರ್ಕಾರದ ಇಲಾಖೆಗಳಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸಲು ಕಾರ್ಯಗಾರಗಳನ್ನು ಏರ್ಪಡಿಸಿ ಉದ್ಯಮಶೀಲತಾ ತರಬೇತಿ ನೀಡುವುದು.

23. **<u>ನಿಯಮಗಳಿಗೆ ತಿದ್ದುಪಡಿ:-</u>** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

15/7/16

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

<u>ಅನುಬಂಧ-6</u>

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 308 ಬಿಎಂಎಸ್ 2020, ದಿ:15-09-2020 ರ ಮಾರ್ಗಸೂಚಿಗಳು

## ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಸಹಾಯಧನ ಯೋಜನೆಯ ನಿಯಮ ಮತ್ತು ಮಾರ್ಗಸೂಚಿಗಳು.

1. **ಪ್ರಸ್ತಾವನೆ:-**

ಸನ್ಮಾನ್ಯ ಮುಖ್ಯಮಂತ್ರಿಯವರ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-169ರಲ್ಲಿ **"ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.25.00ಕೋಟಿ ಅನುದಾನ ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 262 ಬಿಸಿಎ 2018, ದಿನಾಂಕ:28/01/2019 ಮತ್ತು 13/02/2020ರ ಆದೇಶಗಳನ್ವಯ ಕಂಪನಿ ಕಾಯ್ದೆ 2013ರನ್ವಯ ದಿನಾಂಕ:27/02/2020ರಂದು ನೋಂದಾಯಿಸಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದವರು ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯಗಳಲ್ಲಿ ಹೆಚ್ಚಿನ ಘಟಕವೆಚ್ಚವಿರುವ ಉದ್ಯಮಗಳಾದ ಆಟೋರಿಕ್ಷಾ, ಬೇಕರಿ, ಹೋಟೆಲ್, ಕಂಪ್ಯೂಟರ್ ಘಟಕ, ಹಿಟ್ಟಿನಗಿರಣಿ, ಆಟೋಮೊಬೈಲ್‌ಗ್ಯಾರೇಜ್, ಮೊಬೈಲ್ ರಿಪೇರಿ ಅಂಗಡಿ, ಇಟ್ಟಿಗೆ ಉದ್ಯಮ, ಡೈರಿ ಉದ್ಯಮ ಮುಂತಾದವುಗಳನ್ನು ಸ್ಥಾಪಿಸಿ ನಡೆಸಲು ಬ್ಯಾಂಕ್‌ಗಳಿಂದ ಸಾಲ ಮತ್ತು ನಿಗಮದಿಂದ ಸಹಾಯಧನ ಒದಗಿಸಲು ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಅದರಂತೆ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು ಮತ್ತು ನಿಯಮ/ನಿಬಂಧನೆಗಳು ಈ ಕೆಳಕಂಡಂತೆ ಇವೆ.

2. **ಯೋಜನೆ ಉದ್ದೇಶ:-** ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದವರಿಗೆ ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯಗಳಲ್ಲಿ ಹೆಚ್ಚಿನ ಘಟಕವೆಚ್ಚವಿರುವ ಲಾಭದಾಯಕ ಉದ್ಯಮಗಳನ್ನು ಸ್ಥಾಪಿಸಿ ನಡೆಸಲು ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಮತ್ತು ನಿಗಮದಿಂದ ಸಹಾಯಧನ ಒದಗಿಸುವುದು.

3. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-**

- ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ: 01-02-1966ರ ಆದೇಶ ಸಂಖ್ಯೆ ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65 ಸರ್ಕಾರದ ಆದೇಶದಲ್ಲಿ ಗುರ್ತಿಸಿದ 1)ಬೈರಾಗಿ (ಬಾವ), 2)ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ. 5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕಥಿ-ಜೋಷಿ, 8)ಧೋಲಿ, 9)ಢವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ, 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು, 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ-ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40) ಮಸಣಿಯ ಯೋಗಿ, 41)(ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್ ಜನಾಂಗಕ್ಕೆ ಸೇರಿದವರಾಗಿರಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.98,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ.1,20,000/-ಗಳನ್ನು ಮೀರಿರಬಾರದು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯೊಳಗಿರಬೇಕು.

- ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ವಿಕಲಚೇತನರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- **ಆದ್ಯತೆ:-** ವಿಧವೆಯರಿಗೆ, ತೃತೀಯ ಲಿಂಗದವರಿಗೆ ಹಾಗೂ ಮಾಜಿ ಸೈನಿಕರ ಕುಟುಂಬದ ಸದಸ್ಯರಿಗೆ ಆದ್ಯತೆ ಮೇಲೆ ಸೌಲಭ್ಯ ಒದಗಿಸಬೇಕು.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- ಅಭ್ಯರ್ಥಿಯು ಕೈಗೊಳ್ಳುವ ಆರ್ಥಿಕ ಚಟುವಟಿಕೆಯ ಬಗ್ಗೆ ತರಬೇತಿ/ಅನುಭವ/ತಿಳುವಳಿಕೆ ಹೊಂದಿರಬೇಕು.
- ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.
- ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

4. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-** ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಬೇಕು.

    - ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್ ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
    - ಅರ್ಜಿದಾರರ ವಾಸದ ಪುರಾವೆಗಾಗಿ ಸಕ್ಷಮ ಪ್ರಾಧಿಕಾರಿಗಳು ನೀಡಿದ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.
    - ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
    - ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
    - ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆಯಲ್ಲಿ ಅನುಭವ/ತರಬೇತಿ ಬಗ್ಗೆ ಪ್ರಮಾಣ ಪತ್ರ/ಸ್ವಯಂ ಘೋಷಣೆ ಪತ್ರ.
    - ಅರ್ಜಿದಾರರು ಉದ್ಯಮ ಸ್ಥಾಪಿಸಲು ಅವಶ್ಯವಿರುವ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಲು ಸರಬರಾಜುದಾರರಿಂದ ಪಡೆದ Invoice ಮತ್ತು ಯೋಜನಾ ವರದಿ ಒದಗಿಸುವುದು.
    - ಅರ್ಜಿದಾರರು ಸ್ಥಾಪಿಸುವ ಉದ್ಯಮಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಅಗತ್ಯ ಲೈಸೆನ್ಸ್ ಹಾಗು ಪರವಾನಗಿ ಹೊಂದಿರಬೇಕು.
    - ಸಾರಿಗೆ ಉದ್ದೇಶಕ್ಕಾಗಿ ಸಾಲ ಬಯಸಿದಲ್ಲಿ ಅರ್ಜಿದಾರರು ಡ್ರೈವಿಂಗ್ ಲೈಸೆನ್ಸ್ ಮತ್ತು ಬ್ಯಾಡ್ಜ್ ಹೊಂದಿರಬೇಕು.
    - ಸಾಲದ ಭದ್ರತೆಗೆ ಬ್ಯಾಂಕ್ ವ್ಯವಸ್ಥಾಪಕರು ಕೋರುವ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.
    - ಅರ್ಜಿದಾರರ ಆಸ್ತಿ ಮತ್ತು ಋಣಭಾರಗಳ ಘೋಷಣಾ ಪತ್ರ (ನಿಗದಿತ ನಮೂನೆಯಲ್ಲಿ).

5. **ಘಟಕ ವೆಚ್ಚ(ಸಾಲ ಮತ್ತು ಸಹಾಯಧನದ ಮೊತ್ತ):-**

**ಸಾಲದ ಮೊತ್ತ:-** ಅರ್ಜಿದಾರರು ಕೈಗೊಳ್ಳುವ ವ್ಯಾಪಾರ, ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು, ಸೇವಾ ಉದ್ದಿಮೆಗಳು, ತಾಂತ್ರಿಕ ಉದ್ದಿಮೆಗಳು ಮತ್ತು ಸಾರಿಗೆ ವಲಯದಲ್ಲಿ ಕೈಗೊಳ್ಳುವ ಆರ್ಥಿಕ ಚಟುವಟಿಕೆಯನುಸಾರ ಗರಿಷ್ಠ ರೂ.10.00ಲಕ್ಷಗಳವರೆಗೆ ಬ್ಯಾಂಕ್‌ಗಳಿಂದ ಸಾಲ ಪಡೆಯುವುದು.

**ಸಹಾಯಧನ:-** ಬ್ಯಾಂಕ್ ಮಂಜೂರು ಮಾಡುವ ಸಾಲದ ಮೊತ್ತದಲ್ಲಿ ಶೇ.20ರಷ್ಟು ಗರಿಷ್ಠ ರೂ.1.00ಲಕ್ಷಗಳನ್ನು ನಿಗಮದಿಂದ ಸಹಾಯಧನ ಮಂಜೂರು ಮಾಡಲಾಗುವುದು.

**ಬಡ್ಡಿ:-** ಬ್ಯಾಂಕ್‌ಗಳು ಮಂಜೂರು ಮಾಡುವ ಸಾಲಕ್ಕೆ ಬ್ಯಾಂಕ್‌ಗಳು ಚಾಲ್ತಿಯಲ್ಲಿರುವ ಬಡ್ಡಿಯನ್ನು ವಿಧಿಸಲಾಗುತ್ತದೆ.

6. **ಮರುಪಾವತಿ:-** ಬ್ಯಾಂಕ್‌ಗಳು ನಿಗಧಿಪಡಿಸುವ ಕಂತುಗಳನ್ವಯ ಸಾಲ ಮತ್ತು ಬಡ್ಡಿಯನ್ನು ಬ್ಯಾಂಕ್‌ಗಳಿಗೆ ಮರುಪಾವತಿ ಮಾಡಬೇಕು.

**ಫಲಾನುಭವಿಗಳ ಆಯ್ಕೆ:-**

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಈ ಕೆಳಕಂಡ ಆಯ್ಕೆ ಸಮಿತಿ ಮೂಲಕ ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

| ಕ್ರ ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು |
| 7 | ಜನೆರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ |

7. **ಆಯ್ಕೆ ಸಮಿತಿಯ ಕರ್ತವ್ಯಗಳು:-**

- ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢೀಕರಿಸಿಕೊಂಡು ಅಂತಹ ಅರ್ಜಿಗಳನ್ನು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಬೇಕು.

- ಆಯ್ಕೆ ಸಮಿತಿಯು ನಿಗದಿತ ಗುರಿಯ ಪ್ರಗತಿ ಸಾಧಿಸಲು 1:2ರಂತೆ ಅರ್ಜಿಗಳನ್ನು ಆಯ್ಕೆ ಮಾಡಬೇಕು. ಆಯ್ಕೆ ಮಾಡಿದ 2 ಅರ್ಜಿಗಳಲ್ಲಿ ಮೊದಲ ಆದ್ಯತೆಯ 01 ಅರ್ಜಿಯನ್ನು ಸಂಬಂಧಿಸಿದ ಬ್ಯಾಂಕ್ ಶಾಖೆಗೆ ಸಾಲ ಮಂಜೂರಾತಿಗೆ ಕಳುಹಿಸಬೇಕು. ಕಾರಣಾಂತರದಿಂದ ಈ ಅರ್ಜಿ ತಿರಸ್ಕೃತಗೊಂಡಲ್ಲಿ 2ನೇ ಅರ್ಜಿಯನ್ನು ಬ್ಯಾಂಕ್‌ಗೆ ಶಿಫಾರಸ್ಸು ಮಾಡಬೇಕು.

8. ಬ್ಯಾಂಕ್ ಶಾಖೆಯ ವ್ಯವಸ್ಥಾಪಕರು ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆಯ ಲಾಭದಾಯಕ ಮತ್ತು ಆದ್ಯತೆ (Economic Feasability & Vaiability) ಬಗ್ಗೆ ಪರಿಶೀಲನೆ ಮಾಡಿ ಸಾಲ ಮಂಜೂರು ಮಾಡಿ ನಿಗಮದಿಂದ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಮಂಜೂರಾತಿ ಕ್ಲೈಮ್ ಪತ್ರವನ್ನು ಜಿಲ್ಲಾ ಕಛೇರಿಗೆ ಕಳುಹಿಸುತ್ತಾರೆ. ಹೀಗೆ ಬ್ಯಾಂಕಿನಿಂದ ಮಂಜೂರಾದಂತಹ ಪ್ರಕರಣಗಳ ಪ್ರಸ್ತಾವನೆಗಳನ್ನು ಪಟ್ಟಿ ಮಾಡಿ ಜಿಲ್ಲಾ ಆಯ್ಕೆ ಸಮಿತಿಯ ಅಧ್ಯಕ್ಷರಿಂದ ಅನುಮೋದನೆ ಪಡೆದು ಸಹಾಯಧನ ಬಿಡುಗಡೆಗೆ ಮಂಜೂರಾತಿ ಪ್ರಸ್ತಾವನೆಯನ್ನು ವಿಭಾಗೀಯ ಕಛೇರಿಗೆ ಕಳುಹಿಸಬೇಕು. ವಿಭಾಗೀಯ ಕಛೇರಿಯಲ್ಲಿ ಪ್ರಸ್ತಾವನೆ ಪರಿಶೀಲಿಸಿ ನಿಗದಿತ ಗುರಿಯನ್ವಯ ಮಂಜೂರು ಮಾಡಿ ಸಂಬಂಧಿಸಿದ ಬ್ಯಾಂಕಿಗೆ ಚೆಕ್ ಮೂಲಕ ಬಿಡುಗಡೆ ಮಾಡುವುದು.

9. **<u>ಸಾಲ ಮಂಜೂರಾತಿಯ ವಿಧಾನ:-</u>**

- ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ವರ್‌ನಲ್ಲಿ ದಾಖಲಿಸಬೇಕು.
- ಜಿಲ್ಲಾ ವ್ಯವಸ್ಥಾಪಕರು ಅರ್ಹ ಅರ್ಜಿಗಳ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.
- ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಕೈಗೊಳ್ಳುವ ಉದ್ದೇಶದ ಲಾಭದಾಯಕತೆ ಮತ್ತು ಸಮಂಜಸತೆ, ಅನುಭವ, ಮರುಪಾವತಿ ಇಚ್ಛಾಶಕ್ತಿ, ಸಾಲದ ಭದ್ರತೆಗೆ ಒದಗಿಸುವ ದಾಖಲೆಗಳು ಮುಂತಾದ ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಆಯ್ಕೆ ಸಮಿತಿಯು ಆಯ್ಕೆ ಮಾಡುವುದು. ಹೀಗೆ ಆಯ್ಕೆಯಾದ ಅರ್ಜಿಗಳನ್ನು ಬ್ಯಾಂಕ್‌ಗೆ ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡಬೇಕು.
- ಆಯ್ಕೆ ಸಮಿತಿಯಿಂದ ಆಯ್ಕೆಯಾದ ಅರ್ಜಿದಾರರ ಅರ್ಜಿಗಳನ್ನು 1:2ರ ಪ್ರಮಾಣದಲ್ಲಿ ಬ್ಯಾಂಕಿಗೆ ಶಿಫಾರಸ್ಸು ಮಾಡಬೇಕು. ಆಯ್ಕೆ ಮಾಡಿದ 2 ಅರ್ಜಿಗಳಲ್ಲಿ ಮೊದಲ ಆದ್ಯತೆಯ 01 ಅರ್ಜಿಯನ್ನು ಸಂಬಂಧಿಸಿದ ಬ್ಯಾಂಕ್ ಶಾಖೆಗೆ ಸಾಲ ಮಂಜೂರಾತಿಗೆ ಕಳುಹಿಸಬೇಕು. ಕಾರಣಾಂತರದಿಂದ ಈ ಅರ್ಜಿ ತಿರಸ್ಕೃತಗೊಂಡಲ್ಲಿ 2ನೇ ಅರ್ಜಿಯನ್ನು ಬ್ಯಾಂಕ್‌ಗೆ ಶಿಫಾರಸ್ಸು ಮಾಡಬೇಕು. ಬ್ಯಾಂಕ್ ಶಾಖೆಯವರು ಅರ್ಜಿದಾರರ ದಾಖಲಾತಿಗಳನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಪರಿಗಣಿಸಿ ಸಾಲ ಮಂಜೂರಾತಿ ನೀಡಿದ ಬಗ್ಗೆ ಸಹಾಯಧನ ಬಿಡುಗಡೆಗೆ ನಿಗಮದ ಜಿಲ್ಲಾ ಕಛೇರಿಗೆ ಮಂಜೂರಾತಿ ಆದೇಶ ಹಾಗೂ ಸಹಾಯಧನ ಮಂಜೂರಾತಿಗೆ ಕ್ಲೈಮ್ ಲೆಟರ್/ಪ್ರಸ್ತಾವನೆ ಸಲ್ಲಿಸಬೇಕು.
- **<u>ಸಾಲ ಮತ್ತು ಸಹಾಯಧನದ ವಿತರಣೆ:-</u>** ಬ್ಯಾಂಕ್ ವ್ಯವಸ್ಥಾಪಕರು ಸಾಲದ ಮೊತ್ತಕ್ಕೆ ಅಗತ್ಯ ದಸ್ತಾವೇಜು/ದಾಖಲೆಗಳನ್ನು ಪಡೆದ ನಂತರ ನಿಗಮದಿಂದ ಬಿಡುಗಡೆ ಮಾಡಿದ ಸಹಾಯಧನ ಮತ್ತು ಬ್ಯಾಂಕ್ ಪಾಲಿನ ಮೊತ್ತದೊಂದಿಗೆ ಬ್ಯಾಂಕ್ ನಿಯಮಾನುಸಾರ ವಿತರಿಸುವುದು. ಸಹಾಯಧನ ವಿತರಿಸಿದ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರು ನಿಗಮಕ್ಕೆ ದೃಢೀಕರಣ ಪತ್ರ ಒದಗಿಸಬೇಕು. ಸಹಾಯಧನ ಸ್ವೀಕರಿಸಿದ 2 ತಿಂಗಳೊಳಗಾಗಿ ವಿತರಿಸಬೇಕು. ತಪ್ಪಿದಲ್ಲಿ ನಿಗಮಕ್ಕೆ ಹಿಂತಿರುಗಿಸಬೇಕು. ಈ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಪರಿಶೀಲಿಸಿ ದೃಢೀಕರಿಸಿಕೊಳ್ಳಬೇಕು.

10. **<u>ಘಟಕ ಸ್ಥಾಪನೆ:-</u>** ಫಲಾನುಭವಿ ಬ್ಯಾಂಕ್‌ನಿಂದ ಪಡೆದ ಸಾಲ ಮತ್ತು ಸಹಾಯಧನದ ಮೊತ್ತದಿಂದ ಉದ್ದೇಶಿತ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸಬೇಕು. ಘಟಕದ ಮೇಲೆ - ಬ್ಯಾಂಕ್ ಶಾಖೆ ಮತ್ತು **"ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಆರ್ಥಿಕ ನೆರವು"** ಎಂದು ನಾಮ ಫಲಕ ಅಳವಡಿಸಬೇಕು.

...5

ಈ ಬಗ್ಗೆ ನಿಗಮಕ್ಕೆ ಘಟಕದ ಫೋಟೋವನ್ನು ಒದಗಿಸಬೇಕು. ನಿಗಮದ ಜಿಲ್ಲಾ ವ್ಯವಸ್ಥಾಪಕರು, ಫಲಾನುಭವಿ ಪಡೆದ ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಅಗಿಂದಾಗೆ ಪರಿಶೀಲನೆ ಮಾಡುವುದು.

11. **ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-** ಬ್ಯಾಂಕ್ ಶಾಖೆಯಿಂದ ಸಾಲ ಮಂಜೂರು ಮಾಡಿ ನಿಗಮದಿಂದ ಸಹಾಯಧನ ಬಿಡುಗಡೆ ಮಾಡಿದ ಫಲಾನುಭವಿಗಳ ವಿವರಗಳನ್ನು ಸಾಲದ ಖಾತಾ ಪುಸ್ತಕದಲ್ಲಿ ದಾಖಲಿಸಿ ನಿರ್ವಹಿಸಬೇಕು.

12. **ನಿಯಮಗಳಿಗೆ ತಿದ್ದುಪಡಿ:-** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

15/9/17

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ